ನನ್ನ ಅಸಹಾಯಕತೆಯೆಂದು ತಿಳಿದುಕೊಂಡಿದ್ದಾರೋ, ಅಥವಾ ನನಗೆ ರೂಲ್ಸ್ ಪರಿಚಯವಿಲ್ಲವೆಂದು ತಿಳಿದುಕೊಂಡಿದ್ದಾರೋ ಅಥವಾ ಮೃದುಸ್ವಭಾವ ಹೀಗೇ ಇದೆ ಅದರಿಂದ ಸವಾರಿ ಮಾಡಬಹುದೆಂದು ತಿಳಿದುಕೊಂಡಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. ನನಗಂತೂ ಇವತ್ತು ಅಪಮಾನ ಆಗಿದೆ. 2 ಗಂಟೆಯ ಕಾಲ ನಾನು ಶೂನ್ಯವೇಳೆಯಲ್ಲಿ ಕಾರ್ಯಕ್ರಮ ನಡೆಸಿದ್ದೇನೆಂದರೆ, ಇದು ಯಾವ ಅಧ್ಯಕ್ಷರಿಗೂ ಕೂಡ ಗೌರವ ತರತಕ್ಕಂಥ ವಿಷಯ ಅಲ್ಲ. ದಯವಿಟ್ಟು ತಮ್ಮೆಲ್ಲರ ಸಹಕಾರವನ್ನು ಅಪೇಕ್ಷೆ ಪಡುತ್ತಿದ್ದೇನೆ. ಈಗ ಸಭೆಯನ್ನು ಮುಂದೂಡುತ್ತೇನೆ. ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಯಕ್ಕೆ ಸಭೆ ಸಮಾವೇಶಗೊಳ್ಳುವುದು.

(ಸಭೆಯನ್ನು ಮಧ್ಯಾಹ್ನ 2-10ಕ್ಕೆ ಮುಂದೂಡಿ ಪುನಃ ಮಧ್ಯಾಹ್ನ 3-15ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

ಸದನವು 3.30 ಗಂಟೆಗೆ ಸಮಾವೇಶಗೊಂಡಿತು

(ಸಭಾಧ್ಯಕ್ಷರು ರಮೇಶ್ ಕುಮಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು: ಈಗ ನಿಯಮ 60ರ ಮೇಲೆ ಚರ್ಚೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

(4) ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ವಿಷಯ: ರಾಜ್ಯದ ಕೃಷಿ ಮಾರುಕಟ್ಟೆ ಸಮಿತಿಯ ಆಡಳಿತ ಮಂಡಳಿಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ನಾಮನಿರ್ದೇಶನ ಸದಸ್ಯರಿಗೆ ಮತದನದ ಹಕ್ಕನ್ನು ನೀಡಿರುವುದರಿಂದ ಉಂಟಾಗಿರುವ ಪರಿಸ್ಥಿತಿ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಇವತ್ತು ರೂಲ್ 69ರ ಕೆಳಗೆ, ಕರ್ನಾಟಕ ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ಸಮಿತಿಗಳ ಚುನಾವಣೆಗಳು ಈಗಾಗಲೇ ನಡೆದಿದ್ದು ಇವುಗಳ ಆಡಳಿತ ಮಂಡಳಿಗೆ ಅಧ್ಯಕ್ಷರುಗಳನ್ನು ಚುನಾಯಿಸಲು ನಾಮ ನಿರ್ದೇಶನ ಮಾಡಿರತಕ್ಕಂಥ ಸದಸ್ಯರುಗಳಿಗೆ ಮತದಾನದ ಹಕ್ಕನ್ನು ನೀಡಿರುವುದು ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧಾಬಾಸ ಉಂಟಾಗಿದ್ದು ಈ ಬಗ್ಗೆ ಚರ್ಚೆ ಮಾಡಬೇಕೆಂದು ನಾವು ತಮ್ಮಲ್ಲಿ ವಿನಂತಿಸಿಕೊಂಡ ಮೇರೆಗೆ ತಾವು ಅಪ್ಪಣೆ ಕೊಟ್ಟು ಚರ್ಚೆಗೆ ಮುಕ್ತ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ತಮಗೆ ಈಗಾಗಲೇ ಸಾಕಷ್ಟು ಮಾಹಿತಿ ಮತ್ತು ತಿಳುವಳಿಕೆ ಕೂಡ ಇದೆ. ಈ ಅಗ್ರಿಕಲ್ಚರ್ ಪ್ರೊಡ್ಯೂಸ್ ಮಾರ್ಕೆಟ್ ಕಮಿಟಿಗಳಿಗೆ ಏಪ್ರಿಲ್

ತಿಂಗಳಲ್ಲಿ ಅಂದರೆ 4 ತಿಂಗಳುಗಳ ಹಿಂದೆ ಚುನಾವಣೆ ನಡೆಯಿತು. ಒಟ್ಟು 104 ಎ.ಪಿ.ಎಂ.ಸಿ.ಗಳಲ್ಲಿ 103 ಎ.ಪಿ.ಎಂ.ಸಿ.ಗಳಿಗೆ ಚುನಾವಣೆ ನಡೆದು ಅದರ ಫಲಿತಾಂಶ ಕೂಡ ಪ್ರಕಟವಾಯಿತು. ಅದರಲ್ಲಿ ಪಕ್ಷ ಬೇಧ ಇಲ್ಲದೆ ಚುನಾವಣೆ ನಡೆದರೂ ಕೂಡ ಪಕ್ಷಗಳ ಸದಸ್ಯರುಗಳು ಆ ಚುನಾವಣೆಯಲ್ಲಿ ಭಾಗವಹಿಸುತ್ತಾರೆ ಎನ್ನತಕ್ಕಂಥಾದ್ದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಆ ಬಗ್ಗೆ ನಾವು ಸರ್ವೇ ಮಾಡಿ ನೋಡಿದಾಗ ಯಾವ ಯಾವ ಅಗ್ರಿಕಲ್ಚರ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿಯಲ್ಲಿ ಯಾವ ಯಾವ ಸದಸ್ಯರುಗಳು ಯಾವ ಯಾವ ಪಕ್ಷಕ್ಕೆ ಸೇರಿದವರಾಗಿದ್ದಾರೆಂಬುದು ಗೊತ್ತಾಗುತ್ತದೆ. ಅದರಂತೆ ನಾವು ಕಲೆಕ್ಟ್ ಮಾಡಿದ ಮಾಹಿತಿ ಪ್ರಕಾರ ಚುನಾವಣೆಯಲ್ಲಿ ಗೆದ್ದಿರುವ ಸದಸ್ಯರುಗಳ ಪೈಕಿ 652 ಜನ ಸದಸ್ಯರುಗಳು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದು, 532 ಜನ ಜನತಾದಳ ಪಕ್ಷಕ್ಕೆ ಸೇರಿದ್ದಾರೆ ಹಾಗೂ ಉಳಿದ 104 ಜನ ಸದಸ್ಯರುಗಳು ಯಾವುದೇ ಪಕ್ಷಕ್ಕೆ ಸೇರಿದವರಾಗಿರದೆ ಇಂಡಿಪೆಂಡೆಂಟ್ ಸದಸ್ಯರುಗಳಾಗಿದ್ದಾರೆ. ಈ ಅಗ್ರಿಕಲ್ಚರ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿ ಚುನಾವಣೆ ಎಂದರೆ, ಹಳ್ಳಿಯ ರೈತ ಜನರುಗಳಿಗೆ ನೇರವಾಗಿ ಸಂಬಂಧ ಪಟ್ಟಿರತಕ್ಕಂಥ ಚುನಾವಣೆಯಾಗಿರುತ್ತದೆ. ಈ ಚುನಾವಣೆಯಲ್ಲಿ ಖಾತೆದಾರರುಗಳು ಮಾತ್ರ ಮತದಾರರಾಗಿರುತ್ತಾರೆ. ಈ ಚುನಾವಣೆಯಲ್ಲಿ ರೈತರುಗಳೇ ಸದಸ್ಯರುಗಳಾಗಿ ಆರಿಸಿ ಬಂದಿದ್ದರೂ ಅವರು ತಮ್ಮದೇ ಆದಂಥ ಕಮಿಟಿಗಳನ್ನು ರಚನೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರಲ್ಲಿ ಹೆಣ್ಣುಮಕ್ಕಳಿಗೆ ಒಂದು ಸ್ಥಾನ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಒಂದು ಸ್ಥಾನವನ್ನು ಮೀಸಲಿಡುವ ಕಾನೂನನ್ನು ಅಳವಡಿಸಿಕೊಂಡು ಈ ಚುನಾವಣೆಯನ್ನು ಮಾಡಲಾಗಿದೆ. ಪ್ರಜಾಪ್ರಭುತ್ವ ತತ್ವದ ಪ್ರಕಾರ ಚುನಾವಣೆಯನ್ನು ಮಾಡಿದ ನಂತರ ಆರ್ಡಿನೆನ್ಸ್ ಮುಖಾಂತರ ನಾಮಿನೇಷನ್ ಮಾಡತಕ್ಕಂಥ ಪ್ರಮೇಯ ಏಕೆ ಬಂತು? ಈ ಹಿಂದೆ ಇದೇ ಮಾರ್ಕೆಟಿಂಗ್ ಕಮಿಟಿಗಳಿಗೆ 5 ಜನರನ್ನು ನಾಮಿನೇಟ್ ಮಾಡಬಹುದೆಂಬ ನಿಯಮವು ಸೆಕ್ಷನ್ 11 ಆಫ್ ದಿ ಪ್ರಿನ್ಸಿಪಲ್ ಆ್ಯಕ್ಟ್‌ನಲ್ಲಿ ಇತ್ತು. ಈ ರೀತಿ ನಾಮಿನೇಟ್ ಮಾಡುವುದು ಸರಿಯಲ್ಲ, ಈ ಸಮಿತಿಗೆ ಯಾವ ಜನರಿಗೆ ರೆಪ್ರೆಸೆಂಟೇಷನ್ ಕೊಡಬೇಕೋ ಅವರುಗಳನ್ನು ಚುನಾವಣೆಯಲ್ಲಿ ಆರಿಸಿ ತಂದು ನೇರವಾದಂಥ ಪ್ರಾತಿನಿಧ್ಯ ಕೊಡಬೇಕೆನ್ನುವ ದೃಷ್ಟಿಯಿಂದ ಆಗ ಮಾನ್ಯ ಅಜ್ಜಿಬಾಳ ಹೆಗಡೆಯವರ ಅಧ್ಯಕ್ಷತೆ ಮತ್ತೆ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡಂಥ ಸಮಿತಿಯು, ಈ ಸಮಿತಿಯಲ್ಲಿ ಶ್ರೀಮಾನ್ ನಾಣಯ್ಯನವರು, ಮಾನ್ಯ ಕೆ.ಹೆಚ್.ಪಾಟೀಲರು, ಸುಬ್ಬರಾಯ ಭಟ್ಟರು, ರೈತ ಸಂಘದ ಸದಸ್ಯರಾಗಿದ್ದಂಥ ಎಂಎಸ್ ಶಂಕರಿಕೊಪ್ಪ ಅವರು, ಅಶ್ವಥ್‌ನಾರಾಯಣರೆಡ್ಡಿಯವರು, ವಿರೂಪಾಕ್ಷಪ್ಪ ಗೌಡ ಎಸ್.ಎಲ್.ಗಂಗಾಧರಪ್ಪ ಅವರು ಇದ್ದರು. ಆಗ ಕೆ.ಪಿ.ಕೃಷ್ಣನ್ ಎನ್ನುವ ಐ.ಎ.ಎಸ್. ಅಧಿಕಾರಿಯವರು ಈ ಸಮಿತಿಗೆ ಕಾರ್ಯದರ್ಶಿಗಳಾಗಿದ್ದರು. ಆ ಸಮಯದಲ್ಲಿ ಸೆಕ್ಷನ್ 11 ಸಬ್ ಸೆಕ್ಷನ್ 1, ಎ 1, ಬಿ, ಸಿ.ಡಿ., ಇದಕ್ಕೆ ತಿದ್ದುಪಡಿಯನ್ನು ತಂದು ನಾಮನಿರ್ದೇಶನ ಮಾಡುವುದನ್ನು ಕಿತ್ತು ಹಾಕಿ ಯಾರು ಯಾರಿಗೆ ರೆಪ್ರೆಸೆಂಟೇಷನ್ ಕೊಡಬೇಕೆಂದು ನಿಯಮವನ್ನು ಮಾಡಿದರು.

ಅದರಲ್ಲಿ ಟ್ರೇಡರ್ಸ್‌ಗೆ,- 1, ಹೆಣ್ಣುಮಕ್ಕಳಿಗೆ- 1, ಪರಿಶಿಷ್ಟ ಜಾತಿ ಪಂಗಡದವರಿಗೆ- 1 ಮತ್ತು ಎಲ್ಲಿಯಾದರೂ ಪ್ರೋಸೆಸಿಂಗ್ ಸೊಸೈಟ ಇದ್ದರೆ One member shall be a representative of Co-operative Marketing societies and Co.operative Processing Societies carrying on business in notified agricultural produce within the area of operation of which the market yard is situated who is not disqualified under Section 16 Elected by the Committee. ಅಂದರೆ, ಕೊ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಯ ರೆಪ್ರೆಸೆಂಟೇಟ್ಸ್ ಮತ್ತು ಕೋ-ಆಪರೇಟಿವ್ ಪ್ರೋಸೆಸಿಂಗ್ ಸೊಸೈಟೀಸ್, ಯಾರು ಆ ಜ್ಯುರಿಸಿಡಿಕ್ಷನ್‌ನಲ್ಲಿ ಬಿಸ್‌ನೆಸ್ ಮಾಡುತ್ತಿರುತ್ತಾರೋ ಅಂಥವರೊಬ್ಬರನ್ನು ಇದರಲ್ಲಿ ಪ್ರತಿನಿಧಿಯಾಗಿ ತೆಗೆದುಕೊಳ್ಳಬೇಕೆಂದು ಇದೆ. ಈಗ ನಾನು ಕೇಳತಕ್ಕಂಥಾದ್ದು ಏನೆಂದರೆ, ಈಗ ಲಾ ಅಂಡ್ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಏನಿದ್ದಾರೆ ಅವರೆ ಮಾನ್ಯ ಅಜ್ಜಿಬಾಳ ಹೆಗಡೆಯವರ ನೇತೃತ್ವದ ಸಮಿತಿಯಲ್ಲಿ ಸದಸ್ಯರಾಗಿದ್ದಂಥ ಸಮಯದಲ್ಲಿ ರಿಪೋರ್ಟ್ ಕೊಟ್ಟ ಆಧಾರದ ಮೇಲೆ ತಿದ್ದುಪಡಿಯನ್ನು ತಂದು ಚುನಾವಣೆಗಳನ್ನು ಮಾಡಿ, ಚುನಾವಣೆಯ ರಿಸಲ್ಟ್ ಡಿಕ್ಲೇರ್ ಆದ ಮೇಲೆ 104 ಮಾರ್ಕೆಟಿಂಗ್ ಕಮಿಟಿಗಳಲ್ಲಿ ಅವರ ಪಕ್ಷಕ್ಕೆ ಬಹುಮತ ಇಲ್ಲವೆಂದು ತಿಳಿದುಕೊಂಡ ಮೇಲೆ ಸರ್ಕಾರದ ಹಿಡಿತವನ್ನು ಈ ಮಾರ್ಕೆಟಿಂಗ್ ಕಮಿಟಿಗಳಲ್ಲಿ ಇಟ್ಟುಕೊಳ್ಳುವುದಕ್ಕೋಸ್ಕರ ಈ ಆರ್ಡಿನೆನ್ಸ್‌ನ್ನು ಇಶ್ಯೂ ಮಾಡಲಾಗಿದೆ. ಈ ಆರ್ಡಿನೆನ್ಸ್‌ನ್ನು ಎಂದು ಇಶ್ಯೂ ಮಾಡಲಾಗಿದೆ? ಈ ಆರ್ಡಿನೆನ್ಸ್‌ನ್ನು ದಿನಾಂಕ: 21 ಮೇ 1997 ರಂದು ಇಶ್ಯೂ ಮಾಡಲಾಗಿದೆ. ಈ ಆರ್ಡಿನೆನ್ಸ್‌ನಲ್ಲಿ ಏನು ಮಾಡಲಾಗಿದೆ? This ordinance be called the Karnataka Agricultural produce Marketing Regulation (Amendment) Ordinance 1997 It shall come into force at once.

Amendment of Section 11: In section 11 of the Karnataka Agricultural produce Marketing Regulation Act 1966, (Karnataka Act No. 27 of 1966) in sub-section (1) after clause (a) the following clause shall be inserted namely"3 members shall be the persons nominated by the State Government who shall have right to vote in all the meetings of the Market Committee and shall hold office at the pleasure of the State Government". ಇದು 21ನೇ ತಾರೀಖು ಹೊರಡಿಸಿದ ಆರ್ಡಿನೆನ್ಸ್‌ನಲ್ಲಿ ಇದೆ. ಇದು ಇರಬಾರದು ಎನ್ನುವ ಉದ್ದೇಶದಿಂದ

ಹಿಂದೇ ಅವರೇ ಕಮಿಟಿ ಮಾಡಿ ಸೆಕ್ಷನ್ 11ಕ್ಕೆ ಅಮೆಂಡ್‌ಮೆಂಟ್ ತಂದು, ಬೇರೆಯವರಿಗೆ ರೆಪ್ರೆಸೆಂಟೇಷನ್ ಕೊಡಬೇಕು, ಡೈರೆಕ್ಟ್ ಎಲೆಕ್ಷನ್‌ನಿಂದ ಬರಲಿ, ಪ್ರಜಾಪ್ರಭುತ್ವದ ಪ್ರಕಾರ ಅವರು ಎಲೆಕ್ಟ್ ಆಗಲಿ, ಎಲ್ಲಾ ಸೆಕ್ಷನ್‌ಗೂ ಅವಕಾಶ ಕೊಡೋಣ, ನಾಮಿನೇಷನ್ ಒಳ್ಳೆಯದಲ್ಲವೆನ್ನತಕ್ಕಂಥ ಮಾತನ್ನು ಹೇಳಿ, ಇನ್ನೊಂದು ಕಡೆ ಇವರು ಈ ರೀತಿಯ ಆರ್ಡಿನೆನ್ಸ್‌ನ್ನು ಇಶ್ಯೂ ಮಾಡಿದ್ದಾರೆ. ಇದಕ್ಕೆ ನಾವು ಏನು ಹೇಳೋಣ? ಇದು ಪ್ರಜಾಪ್ರಭುತ್ವದ ಕೊಲೆ ಎಂದು ಹೇಳೋಣವಾ ಅಥವಾ ಇವರು ಜನರಿಗೆ ದ್ರೋಹ ಮಾಡಿದ್ದಾರೆಂದು ಹೇಳೋಣವಾ ಅಥವಾ ಮೋಸ ಎಂದು ಹೇಳೋಣವಾ? ಅವರೇ ಕೊಟ್ಟಿರುವ ರಿಪೋರ್ಟ್‌ನಲ್ಲಿ ನಾಮಿನೇಷನ್ ಮಾಡುವುದು ಸರಿಯಿಲ್ಲವೆಂದು ಹೇಳಿ ಸೆಕ್ಷನ್ 11ನ್ನು ಅಮೆಂಡ್ ಮಾಡಿ ಪುನಃ ಇದೇ ಸಕ್ಷನ್ 11ಕ್ಕೆ ಮತ್ತೊಂದು ಅಮೆಂಡ್‌ಮೆಂಟ್ ತಂದು ಮೂರು ಜನರನ್ನು ನಾಮಿನೇಟ್ ಮಾಡತಕ್ಕಂಥಾದ್ದು ಮತ್ತು ಅವರಿಗೆ ವೋಟಿಂಗ್ ಅಧಿಕಾರ ಕೊಡತಕ್ಕಂಥಾದ್ದು ಇದು ಯಾವ ನ್ಯಾಯ? ಇದು ಸಂಪೂರ್ಣವಾಗಿ ಡೆಮಾಕ್ರೆಟಿಕ್ ಪ್ರಿನ್ಸಿಪಲ್ಸ್ ಕೊಲೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ನಿಜವಾಗಿಯೂ ನಿಮಗೆ ಆಸಕ್ತಿ ಇದ್ದಿದ್ದರೆ ಆ ಮಾತನ್ನು ಖಂಡಿತವಾಗಿ ಚುನಾವಣೆಯಾಗಿದೆ ಅಂದರೆ ಚುನಾವಣೆ ಪ್ರಕಾರ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯು ನಡೆಯ ಬೇಕೆಂದು ಹೇಳ ಬೇಕಾಗಿತ್ತು. ಆದರೆ ನೀವು ಕೂಡಲೇ ಚುನಾವಣೆ ಮಾಡಲಿಲ್ಲ. ಈ ಕಡೆ ಆರ್ಡಿನೆನ್ಸ್ ಇಶ್ಯೂ ಮಾಡಿ ಆ ಕಡೆ ನೆಕ್ಸ್ಟ್‌ಡೇ, ತಾವು ಏನು ಮಾಡಿದ್ದೀರಿ? ಇದು ಪೊಲಿಟಿಕಲ್ ಮೋಟಿವೇಟೆಡ್ ಎಂಬ ಮಾತನ್ನು ಏಕೆ ಹೇಳುತ್ತಿದ್ದೇನೆ ಅಂದರೆ, ಮತ್ತು ತಾವು ಜನ ವಿರೋಧಿ ನೀತಿಯನ್ನು ತಾವು ತಾಳಿದ್ದೀರಿ ಎನ್ನತಕ್ಕಂಥ ಮಾತನ್ನು ಏಕೆ ಹೇಳುತ್ತಿದ್ದೇನೆ ಅಂದರೆ ತಾವು ನೆಕ್ಸ್ಟ್‌ಡೇ 21ಕ್ಕೆ ಆರ್ಡಿನೆನ್ಸ್ ಮತ್ತು 22ಕ್ಕೆ ಮಾನ್ಯ ಮುಖ್ಯಮಂತ್ರಿಗಳ ಕಚೇರಿಯಿಂದ ಅಥವಾ ಅವರ ಪೊಲಿಟಿಕಲ್ ಸೆಕ್ರೆಟರಿಗಳಿಂದ 22-5-97ಕ್ಕೆ ಒಂದು ಪತ್ರ ಹೋಗುತ್ತದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸರಕಾರದಿಂದ ಮೂರು ಸದಸ್ಯರನ್ನು ನಾಮಕರಣ ಮಾಡುವ ಪ್ರಸ್ತಾವವು ಪರಿಶೀಲನೆಯಲ್ಲಿದೆ. ಅದರಲ್ಲಿ ಸಾಮಾನ್ಯ, ವರ್ಗ, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗ, ಅಲ್ಪ ಸಂಖ್ಯಾತ ಹಾಗೂ ಮಹಿಳೆಯರು ಸೇರಿದಂತೆ ತಮ್ಮ ಕ್ಷೇತ್ರದಲ್ಲಿ ಬರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಮೇಲ್ಕಂಡ ವರ್ಗಗಳನ್ನು ಒಳಗೊಂಡಂತೆ ಮೂರು ಸದಸ್ಯರ ಹೆಸರುಗಳನ್ನು ನಾಮನಿರ್ದೇಶನ ಮಾಡುವ ಸಲುವಾಗಿ ತತ್‌ಕ್ಷಣ ಸೂಚಿಸಲು ಕೋರಿದೆ. ಅಂದರೆ ಎಷ್ಟು ಲೈಟನಿಂಗ್ ಸ್ಪೀಡ್ ಇದೆ ಅಧ್ಯಕ್ಷರೇ? ಒಂದು ಕಡೆ 21ಕ್ಕೆ ಆರ್ಡಿನೆನ್ಸ್. 22ನೇ ತಾರೀಖು ಪೊಲಿಟಿಕಲ್ ಸೆಕ್ರೆಟರಿ ಬಾಬು ಹೆದ್ದೂರಶೆಟ್ಟಿಯವರು ಎಲ್ಲಾ ನಿಮ್ಮ ಪಕ್ಷದ ಶಾಸಕರಿಗೆ, ಪಕ್ಷದ ಎಲ್ಲಾ ಶಾಸಕರುಗಳು ಹಾಗೂ ತಾಲ್ಲೂಕು ಅಧ್ಯಕ್ಷರುಗಳ ಹಾಗೂ ಎಲ್ಲಾ ಸಚಿವರುಗಳ ಆಪ್ತಕಾರ್ಯದರ್ಶಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಎಂದು ಪತ್ರವನ್ನು ಕಳಿಹಿಸುತ್ತಾರೆ. ಈ ಪತ್ರವನ್ನು ತಾವು ಹಾಗೆ ಕಳುಹಿಸಬೇಕಾದರೆ-Is it not politically motivated? Is it not a undemocratic way? Is it

not with mala fide intention that you have issued this Ordinance? ದುರುದ್ದೇಶದಿಂದ ಮಾಡಿದ್ದಾರೆ ಎನ್ನುವುದಕ್ಕೆ ಇದೇ ಸಾಕ್ಷಿ. ಕೇವಲ 12 ತಾಸಿನಲ್ಲಿ ಈ ಒಂದು ಸುತ್ತೋಲೆಯನ್ನು ಹೊರಡಿಸುತ್ತೀರಿ. ಆದರೆ ಆಶ್ರಯ ಸಮಿತಿಯ ಸುತ್ತೋಲೆಯನ್ನು ಹೊರಡಿಸಬೇಕಾದರೆ ಮೂರು ವರ್ಷಗಳು ಬೇಕು, ಲ್ಯಾಂಡ್ ಟ್ರಿಬ್ಯೂನಲ್ ಕಮಿಟಿ ಕಾನ್ಸಿಟ್ಯೂಟ್ ಮಾಡಲು ಮೂರು ವರ್ಷಗಳು ಬೇಕು, ಅನ್‌ಆಥರೈಸ್ಡ್ ಕಲ್ಟಿವೇಷನ್ ಬಡವರಿಗೆ ಸಿಗತಕ್ಕಂಥ ಜಮೀನಿನ ಬಗ್ಗೆ ನೀವು ಕಾನ್ಸಿಟ್ಯೂಟ್ ಮಾಡತಕ್ಕಂಥ ಕಮಿಟಿಗೆ ಮೂರು ವರ್ಷಗಳು ಬೇಕು, ಕೆಡಿಪಿಗೆ ಕಮಿಟಿ ಮಾಡಲು ನಿಮಗೆ ಮೂರು ವರ್ಷಗಳು ಬೇಕು, ಇದಕ್ಕೆ ಮಾತ್ರ 12 ತಾಸಿನಲ್ಲಿ ಲೈಟ್‌ನಿಂಗ್ ಸ್ಪೀಡ್‌ನಲ್ಲಿ ಥ್ರೂಔಟ್ ಸ್ಟೇಟ್ ಕಳುಹಿಸಿ ಆ ಮಂತ್ರಿಗಳಿಗೆ ಟೆಲಿಫೋನ್ ಮುಖಾಂತರ ಇಂಥಿಂಥ ಟೆಲಿಫೋನ್ ಮುಖಾಂತರ ಸಂಪರ್ಕಿಸಿ, ನಾವು ಕಮಿಟಿ ಕಾನ್ಸಿಟ್ಯೂಟ್ ಮಾಡಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳ ಚುನಾವಣೆ ಮಾಡಬೇಕೆಂದು ಹೇಳಿ, ತಾವು ಕೇಳಿಕೊಂಡಿದ್ದೀರಲ್ಲಾ, ಇದು ಯಾವ ನ್ಯಾಯ ಮತ್ತು ಯಾವ ತತ್ವ ಎನ್ನತಕ್ಕಂಥಾದ್ದನ್ನು ಹೇಳಬೇಕು. ಬಹುಶಃ ಯಾರು ಮಾಡಿದ್ದರೂ ಕೂಡ ಮಾನ್ಯ ನಾಗಪ್ಪನವರು ಮಾಡಬಾರದಾಗಿತ್ತು. ಏಕೆಂದರೆ ಉಳಿದವರು ಏನಾದರೂ ಹೇಳಿ ಬದುಕಿಕೊಂಡು ಹೋಗುತ್ತಾರೆ. ತಾವು ಹೊಸದಾಗಿ ಬಂದಿದ್ದೀರಿ. ಇದನ್ನು ಒಳ್ಳೆಯದು ಎಂದು ಹೇಳಿ ಅಜ್ಜಿಬಾಳ್ ರಿಪೋರ್ಟ್‌ನ್ನು ಒಪ್ಪಿಕೊಂಡು ತತ್‌ಕ್ಷಣವೇ ಅಮೆಂಡ್‌ಮೆಂಟ್ ತಂದು ಮರುದಿನವೇ ಆರ್ಡರ್‌ನ್ನು ಇಶ್ಯೂ ಮಾಡಿ ಮತ್ತು ನಾಮಿನೇಷನ್ ಕೂಡ ಅನೇಕ ಕಡೆ ಮಾಡಿಕಳುಹಿಸಿದ್ದೀರಲ್ಲಾ.

ಅಧ್ಯಕ್ಷರು: ನಾಗಪ್ಪನವರು ನಿಮಗಿಂತಲೂ ಹಳಬರು. 1967ರಲ್ಲಿ ಇದ್ದವರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಜಾಬ್‌ಗೆ ಅವರು ಹೊಸಬರು. ನಮ್ಮ ಸರ್ವೀಸ್ ಸ್ವಲ್ಪ ಜಾಸ್ತಿಯಾಗಿದೆ. ನಾನು ಕಂಟಿನ್ಯೂವಸ್ ಸರ್ವೀಸ್‌ನಲ್ಲಿದ್ದೇನೆ. ಅದಕ್ಕಾಗಿ ಸ್ವಲ್ಪ ಹಿಂದಿನದು ಮತ್ತು ಮುಂದಿನ ವಿಚಾರಗಳು ಸ್ವಲ್ಪ ಗೊತ್ತಾಗಿದೆ. ತಾವು ಹೇಳಿದ ಹಾಗೆ ರೆಗ್ಯುಲರೈಸ್ ಮಾಡಿದರೆ ಆಗುತ್ತದೆ. ಆದರೆ ಇಂಥ ಗವರ್ನಮೆಂಟ್‌ನವರು ಎಲ್ಲಿ ರೆಗ್ಯುಲರೈಸ್ ಮಾಡುತ್ತಾರೆ? ರೆಗ್ಯುಲರೈಸ್ ಮಾಡಲು ಮೆಂಬರ್‌ಗಳನ್ನು ಕಾನ್ಸಿಟ್ಯೂಟ್ ಮಾಡುವುದಿಲ್ಲ. ಟ್ರಿಬ್ಯೂನಲ್‌ಗೆ ಕಾನ್ಸಿಟ್ಯೂಟ್ ಮಾಡುವುದಿಲ್ಲ, ಕೆಡಿಪಿಗೆ ಕಾನ್ಸ್‌ಸ್ಟಿಟ್ಯೂಟ್ ಮಾಡುವುದಿಲ್ಲ, ಆಶ್ರಯ ಕಮಿಟಿಗೆ ಕಾನ್ಸಿಟ್ಯೂಟ್ ಮಾಡುವುದಿಲ್ಲ, ಕಾನ್‌ಸ್ಟಿಟ್ಯೂಟ್ ಎಲ್ಲಿ ಮಾಡುತ್ತಾರೆ ಅಂದರೆ, ಎಲ್ಲಿ ಅವರಿಗೆ ಬೇಕೋ, ಎಲ್ಲಿ ಅವರ ಹಿಡಿತದಲ್ಲಿ ಸಂಸ್ಥೆಗಳನ್ನು ಇಟ್ಟುಕೊಳ್ಳಬೇಕೊ ಅಥವಾ ಎಲ್ಲಿ ಪ್ರಜಾಪ್ರಭುತ್ವದ ಪ್ರಕಾರ ನಡೆದುಕೊಳ್ಳುತ್ತೇವೆ ಎಂದು ಏನು ಹೇಳಿದರೋ ಅವರೇ ಕೊ-ಆಪರೇಟಿವ್ ಚುನಾವಣೆಗಳಲ್ಲಿ ನಾವು ಕೈ ಆಡಿಸುವುದಿಲ್ಲ, ಅದರಲ್ಲಿ ಪಾಲಿಟಿಕ್ಸ್ ಬೇಡ ಯಾವುದೂ ಬೇಡ ಎಂದು ಹೇಳತಕ್ಕಂಥವರು ನೂರಕ್ಕೆ ನೂರರಷ್ಟು ಪಾಲಿಟಿಕ್ಸ್‌ನ್ನು ಅವರೇ ಮಾಡುತ್ತಾ ಇದ್ದಾರೆ. ಯಾರು ಹೇಳುತ್ತಿದ್ದರೋ ಅವರೇ

ಮಾಡುತ್ತಾ ಇದ್ದಾರೆ....

ಶ್ರೀ ಎಂ.ಸಿ.ನಾಣಯ್ಯ: ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ ಎಂದು ಇದೆ. ನಿಮ್ಮ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಅಲ್ಲಿ 11 ಮಾಡಿದರು. When he was co-operative Minister, I think, he destroyed the whole co-operative movement.

SRI M.MALLIKARJUN KHARGE: Don't hold power by shouting. At that time, I had a power. However, here you do not have the power and you have done it.

(INTERRUPTIONS)

SRI M.C.NANAIAH: Kindly yeild for a minute.

SRI M.MALLIKARJUN KHARGE: I am on my legs. I have not yielded.

(INTERRUPTIONS)

ನನಗೆ ಅಧಿಕಾರ ಇತ್ತು, ಆ ಅಧಿಕಾರವನ್ನು ನಾನು ಉಪಯೋಗ ಮಾಡಿದ್ದೇನೆ. ಸರಿಯೋ, ಇಲ್ಲವೋ ಎಂಬುದನ್ನು ಕೋರ್ಟ್ ತೀರ್ಮಾನ ಮಾಡಿದೆ. ಕೋರ್ಟ್‌ನ ಪ್ರಕಾರವೇ ಚುನಾವಣೆ ನಡೆಯಿತು. ಆದರೆ ನಿಮಗೆ ಇಲ್ಲಿ ಅಧಿಕಾರ ಇಲ್ಲದೇ ಇರತಕ್ಕಂಥಾದ್ದು ತೆಗೆದುಕೊಂಡು ಚುನಾವಣೆ ಆದಮೇಲೆ ಮಾಡಿದ್ದೀರಲ್ಲಾ, ಅದಕ್ಕೇ ನಾನು ಹೇಳುತ್ತಾ ಇದ್ದೇನೆ. ನಾನು ಚುನಾವಣೆ ಮಾಡಿದ ಮೇಲೆ ಮಾಡಿಲ್ಲ. ಕೊ-ಆಪರೇಟಿವ್ ಆಕ್ಟ್‌ನಲ್ಲಿ ನಾಮಿನೇಷನ್ ಮಾಡತಕ್ಕಂಥ ಪ್ರಾವಿಷನ್ ಇದೆ, ಅದರ ಪ್ರಕಾರವೇ ನಾನು ಮಾಡಿದ್ದೇನೆ. ಹತ್ತೂ ಮಾಡಬಹುದು, 20 ಕೂಡ ಮಾಡಬಹುದು. There was a provision.

SRI M.C.NANAIAH: If he is prepared to yield. What right has he got to preach when he does not practice the values?

SRI M.MALLIKARJUN KHARGE: At that time the provision was there for nomination. I have done according to that.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಖರ್ಗೆಯವರೇ, ನಿಮಗೆ 11 ಮಾಡಲು ಅಧಿಕಾರ ಇರಲೇ ಇಲ್ಲ....

ಶ್ರೀ ಎಂಮಲ್ಲಿಕಾರ್ಜುನ ಖರ್ಗೆ: ನಮಗೆ ಅಧಿಕಾರ ಇತ್ತು ನಾವು ಮಾಡಿದ್ದೇವೆ. ನೀವು ಏನು ಮಾಡಬೇಕೋ ಅದನ್ನು ಮಾಡಿ. ನಾನು ಚುನಾವಣೆ ಆದಮೇಲೆ ನೀವು ಮಾಡಿದ್ದೀರಿ ಎಂದು ಹೇಳುತ್ತಾ ಇದ್ದೇನೆ. ಇಡೀ ರಾಜ್ಯಕ್ಕೆ ನೀವು ಮಾಡಿದ್ದೀರಿ. ಆಗ ನನಗೆ ಅಧಿಕಾರವಿತ್ತು ನಾಮಿನೇಟ್ ಮಾಡಿದ್ದೇವೆ. ನೀವು ಹೇಳಿದ್ದೂ ಮಾಡಿದ್ದೇವೆ ಮತ್ತು ಆ ಕಡೆಯಲ್ಲಿ ಕುಳಿತವರು ಹೇಳಿದ್ದೂ ಮಾಡಿದ್ದೇವೆ.

ಶ್ರೀ ಸಿ.ಎಂ.ಉದಾಸಿ: ನೀವು ಅಧಿಕಾರ ಇಲ್ಲದೇ ಮಾಡಿದ್ದರಿಂದ ಸುಪ್ರೀಂಕೋರ್ಟ್‌ಗೆ ಹೋಗಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾಣಯ್ಯನವರಿಗೆ, ನಾಗಮಾರಪಲ್ಲಿಯವರಿಗೆ ನಾಮಿನೇಷನ್ ಹೇಗೆ ಮಾಡಬೇಕು, ಎಲ್ಲಿ ಮಾಡಬೇಕು ಎಂಬುದು ಅವರಿಗೆ ಗೊತ್ತಿದೆ. ಅವರೂ ಹೇಳಿಕೊಟ್ಟದ್ದರು. ನಾವು ಮಾಡಿದ್ದೇವೆ. ನಮ್ಮ ಕಡೆ ಒಂದು ಗಾದೆ ಮಾತು ಇದೆ, ಹಜಾಮನ ತಿಪ್ಪೆ ಕೆದರಿದರೆ ಕೂದಲು ಬರುತ್ತವೆ ಎಂದು ಹೇಳುತ್ತಾರೆ, ಅದನ್ನು ಮಾಡಲು ಹೋಗಬೇಡಿ.

ಶ್ರೀಮತಿ ಪ್ರಮೀಳಾನೇಸರ್ಗಿ: ನಾಮಿನೇಷನ್‌ನ್ನು ಇಬ್ಬರೂ ಮಾಡಿದ್ದಾರೆ. ಅವರೂ ಮಾಡಿದ್ದಾರೆ, ಇವರೂ ಮಾಡಿದ್ದಾರೆ.

ಅಧ್ಯಕ್ಷರು: ಮೇಡಂ, ಅವರು ಹೇಳಿದ್ದು, ಇಬ್ಬರೂ ಮಾಡಿದ್ದೇವೆಂದು ಹೇಳಿದ್ದಲ್ಲ, ನೀವು ಹೇಳಿದ್ದನ್ನೂ ಮಾಡಿದ್ದೇನೆ ಎಂದು ಗುರುಪಾದಪ್ಪನವರಿಗೆ ಹೇಳಿದ್ದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಕೆದಕಲು ಹೋದರೆ ಕೂದಲು ಸಿಕ್ಕಿತು ಎಂದು ಹೇಳಿದರು....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮಗೆ ಅದು ಅರ್ಥವಾಗಿಲ್ಲ ಎಂದು ಕಾಣುತ್ತದೆ....

ಅಧ್ಯಕ್ಷರು: ನೀವು ತಿಪ್ಪಿ ಅಂದರೆ ನಾವು ತಿಪ್ಪೆ ಎಂದು ಹೇಳುತ್ತೇವೆ.... ಈಗ ನಿಮ್ಮ ಕೂದಲೆಲ್ಲಾ ಎಲ್ಲಿ ಇದ್ದಾವೆ ಎಂಬುದು ಈಗ ಗೊತ್ತಾಯಿತು.... ಅವೆಲ್ಲಾ ತಿಪ್ಪೆನಲ್ಲಿ ಇದ್ದಾವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಅಂದರೆ, ನನಗೆ ಅಧಿಕಾರ ಇದ್ದಾಗ 5 ನಾಮಿನೇಷನ್, 11 ನಾಮಿನೇಷನ್ ಮಾಡಿದ್ದೇವೆ. ಕೋರ್ಟ್‌ನ ತೀರ್ಮಾನವೂ ಬಂತು. ಇಲ್ಲಿ ನಾನು ಹೇಳುವುದೇನೆಂದರೆ ಇಡೀ

ರಾಜ್ಯದಲ್ಲಿ ಚುನಾವಣೆಯಾದ ಮೇಲೆ, ಇದು ಒಂದು ಸೊಸೈಟಿ ಪ್ರಶ್ನೆಯಲ್ಲ. ಒಂದು ಸಕ್ಕರೆ ಕಾರ್ಖಾನೆ ಪ್ರಶ್ನೆ ಅಲ್ಲ. ಒಂದು ಸಕ್ಕರೆ ಕಾರ್ಖಾನೆ ಪ್ರಶ್ನೆ ಅಲ್ಲ. ಅಥವಾ ಒಂದು ಕನ್‌ಸ್ಯೂಮರ್ ಕೊ-ಆಪರೇಟಿವ್ ಸೊಸೈಟಿಯ ಪ್ರಶ್ನೆಯಲ್ಲ. ಇಡೀ ರಾಜ್ಯದಲ್ಲಿ 65 ಲಕ್ಷ ಜನರು ಖಾತೆದಾರರು ಏನಿದ್ದಾರೆ, ಅವರು ನೇರವಾಗಿ ಚುನಾವಣೆಯನ್ನು ಗೆದ್ದಮೇಲೆ ಇಡೀ ರಾಜ್ಯಕ್ಕೆ ಅನ್ವಯಿಸತಕ್ಕಂಥ ಕಾನೂನು ಏನು ತಂದಿದ್ದೀರಲ್ಲಾ, ಅದರ ಬಗ್ಗೆ ನಾನು ಹೇಳುತ್ತಾ ಇದ್ದೇನೆ. ಆ ಕಾನೂನನ್ನು ನೀವು ಚುನಾವಣೆಯಾದ ಮೇಲೆ ತಂದಿದ್ದೀರಿ. ಚುನಾವಣೆಗೆ ಮುಂಚೆ ನಮಗೆ ಹಕ್ಕು ಇದೆ, ಎಲ್ಲರಿಗೂ ಸಾಮಾಜಿಕ ನ್ಯಾಯ ಕೊಡಬೇಕೆಂದು ನಾವು ತಂದಿದ್ದೇವೆ ಎಂದು ಹೇಳಿದ್ದರೆ, ಅದನ್ನು ನಾನು ಒಪ್ಪುತ್ತೇನೆ. ಆದರೆ ರಿಸಲ್ಟ್ ನೋಡಿ, 21ಕ್ಕೆ ಆರ್ಡಿನೆನ್ಸ್ ಹೊರಡಿಸಿ, ಏಪ್ರಿಲ್‌ನಲ್ಲಿ ಚುನಾವಣೆ ಆಯಿತು. ಏಪ್ರಿಲ್ 31ಕ್ಕೆ, ನಿಮ್ಮ ಆರ್ಡಿನೆನ್ಸ್ ಬಂದುದು 21 ಮೇನಲ್ಲಿ. ಸರ್ಕುಲರ್ ಇಶ್ಯೂ ಮಾಡಿದ್ದು 22ಮೇ. ನಾಮಿನೇಷನ್ ಪ್ರಾರಂಭವಾದುದು 26 ಮೇದಿಂದ. ಅಂದರೆ ಇದರ ಅರ್ಥ ಏನು? ಈ ಒಂದು ಪ್ರೋಸೆಸ್‌ನ್ನು ಸ್ಕಟಲ್‌ಡೌನ್ ಮಾಡತಕ್ಕಂಥಾದ್ದು, ಡೆಮಾಕ್ರೆಟಿಕ್ ಪ್ರೋಸೆಸ್‌ನ್ನು ಸ್ಕಟಲ್‌ಡೌನ್ ಮಾಡತಕ್ಕಂಥ ಪ್ರಯತ್ನ ಏನು ಮಾಡಿದ್ದೀರಲ್ಲಾ, ಅದಕ್ಕಾಗಿ ಹೇಳುತ್ತಿದ್ದೇನೆ. ನಿಮಗೆ ಏನಾದರೂ ಚಾಲೆಂಜ್ ಮಾಡಿದ್ದೇವೋ? ನಿಮಗೆ ಆಶ್ರಯ ಸಮಿತಿಯಲ್ಲಿ ನಾಮಿನೇಟ್ ಮಾಡುವ ಹಕ್ಕು ಇದೆ ಅದನ್ನು ಮಾಡಿ ಎಂದು ಹೇಳುತ್ತೇವೆ. ಕೆಡಿಪಿಯಲ್ಲಿ ಹತ್ತು ಮೆಂಬರ್ ಇದೆ ಅದನ್ನು 11 ಮಾಡಿದರೂ ಅದನ್ನು ಮಾಡಿ ಎಂದು ಹೇಳುತ್ತೇವೆ. ಎಲ್ಲಿ ಹಕ್ಕು ನಿಮಗೆ ಇಲ್ಲ ಅದನ್ನು ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ನೀವು ಮಾಡಿದ್ದೀರಲ್ಲಾ, ಅದು ಸರಿಯಲ್ಲ ಎಂದು ನಾನು ಹೇಳುತ್ತಿರುವುದು. 103ರಲ್ಲಿ ನಿಮ್ಮವರು ಕೇವಲ 36 ಜನ ಆರಿಸಿ ಬಂದರು. ಇದನ್ನು ತಿಳಿದುಕೊಂಡು 46 ಕಾಂಗ್ರೆಸ್ ಮೆಜಾರಿಟಿ ಇದೆ ಎಂದು ತಿಳಿದುಕೊಂಡು 13ರಲ್ಲಿ ಬೇರೆಯವರು ಬಂದಿದ್ದಾರೆ, ಯಾವರೀತಿಯಾಗಿ 3 ಜನ ನಾಮಿನೇಷನ್ ಮಾಡಿದರೆ ಅವು 46ನ್ನು ಕೂಡ ನಾವು ಹಿಡಿದಿಟ್ಟುಕೊಳ್ಳಬೇಕು ಎನ್ನತಕ್ಕಂಥ ಕೆಟ್ಟ ಅಭ್ಯಾಸ ಏನು ಇದೆ, ಆ ದುರಾಭ್ಯಾಸ, ಅದರ ಬಗ್ಗೆ ನಾನು ಹೇಳುತ್ತಿದ್ದೇನೆ. ಅದಕ್ಕೆ ಸ್ವಲ್ಪ ತಾಳ್ಮೆಯಿಂದ ಕೇಳಬೇಕು ತಾವು ಕೇಳಿದರೆ ನಾನು ಹೇಳಬಹುದು. ಇಲ್ಲಿ ನೀವು ಏನು ಮಾಡಿದಿರಿ ಎಂದು ಹೇಳಿದರೆ ಅದಕ್ಕೆ ಉತ್ತರ ಬೇರೆ ಹೇಳಬೇಕಾಗುತ್ತದೆ. ಅದಕ್ಕೆ ಇವತ್ತಿನ ದಿವಸ ಹಿಂದಿನದನ್ನು ಇದಕ್ಕೆ ಹೋಲಿಸುವಂತಿಲ್ಲ, ಯಾವುದೋ ಒಂದು ಸೊಸೈಟಿ ನಾಮಿನೇಷನ್ ನೀವು ಇನ್ನೂ ಮಾಡುತ್ತಿದ್ದೀರಿ ಅದೇ ಆ್ಯಕ್ಟ್ ಕೆಳಗೆ ಅದಕ್ಕೇ ನಾನು ಏನೂ ಹೇಳಲಿಲ್ಲ. ಆದರೆ ಇದನ್ನು ದುರುದ್ದೇಶದಿಂದ ಮಾಡಿದ್ದೀರಿ. ಎರಡನೇಯದು ಹೀಗೆ ಆರಿಸಿ ಬಂದಂಥ ಕಮಿಟಿಗಳು ಎಲ್ಲೆಲ್ಲಿ ಇದ್ದವು ಬೇರೆ ಪಕ್ಷದಲ್ಲಿ ಮೆಜಾರಿಟಿ ಏನು ಇದೆ ಕಾಂಗ್ರೆಸ್ ಪಕ್ಷದ್ದು ಅಥವಾ ಬೇರೆ ಪಕ್ಷದ್ದು ಆ ಮೆಜಾರಿಟಿಯನ್ನು ತಳ್ಳಿ ಹಾಕಬೇಕು ಅಂಥ ಸೊಸೈಟಿ ಕಮಿಟಿಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಬೇಕು ಎನ್ನತಕ್ಕಂಥ ದೃಷ್ಟಿಯಿಂದ ತಾವು ಏನು ಕೆಲಸ ಮಾಡಿದ್ದೀರಿ, ಇದು ಸರಿಯಲ್ಲ, ಅದಕ್ಕಾಗಿ ಈ ಅಮೆಂಡ್‌ಮೆಂಟ್‌ನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಆಮೇಲೆ ನಾಮಿನೇಷನ್ ಬೇಕಾದರೆ ತಾವು ಮಾಡಿದರೂ ಕೂಡ ಓಟಿನ ಹಕ್ಕು ಇರಬಾರದು ಅಂದರೆ ಓಟಂಗ್ ಹಕ್ಕು ಏಕೆ ಇರಬಾರದು ಎಂದು ನೀವೇ ರಿಪೋರ್ಟ್ ಕೊಟ್ಟಿರತಕ್ಕಂಥದ್ದು. ನೀವೇ ಸೆಕ್ಷನ್ 11ಕ್ಕೆ ಅಮೆಂಡ್‌ಮೆಂಟ್ ಮಾಡಿ ತಿರುಗಿ ಪುನಃ 11ನೇ ಸೆಕ್ಷನ್‌ಗೆ ಅಮೆಂಟ್‌ಮೆಂಟ್ ಮಾಡಿ ಒಟ್ಟು ಅಧಿಕಾರ ಕೊಡುತ್ತೇವೆಂದು ಹೇಳಿದರೆ ಇದು ಸರಿಯಲ್ಲ. ದಯಮಾಡಿ ಇವತ್ತಿನ ದಿವಸ ಆ ಒಂದುಕ್ರಮ ಏನು ಇದೆ ನಾನು ಖಂಡಿಸುತ್ತೇನೆ. ಮತ್ತು ಈ ಒಂದು ಕರಾಳ ಕಾನೂನು ಏನು ಇದೆ ಈ ಒಂದು ಬ್ಯಾಕ್‌ಲಾಗ್ ಏನು ಇದೆ ಈ ಒಂದು ಎ.ಪಿ.ಎಮ್.ಸಿನಲ್ಲಿ ಬಂದಿದ್ದು ಅದನ್ನು ವಾಪಸ್ಸು ತೆಗೆದುಕೊಂಡು ನಾಮಿನೇಷನನ್ನು ರದ್ದು ಪಡಿಸಬೇಕು. ಮತ್ತು ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆಗೆ ಏನು ಒರಿಜಿನಲ್ ಆಗಿ ಎಲೆಕ್ಟ್ ಆಗಿದ್ದಾನೆ 12 ಜನ ಕೃಷಿಗೆ ಸಂಬಂಧಪಟ್ಟ ಮತ್ತು ಟ್ರೇಡರ್ಸ್ ಅದೇರೀತಿಯಾಗಿ ಎಸ್.ಸಿ; ಉಮೆನ್ಸ್ ಆ ಆಧಾರದ ಮೇಲೆ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆ ಮಾಡಬೇಕು ಮತ್ತು ಈ ಒಂದು ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು ಆರ್ಡಿನೆನ್ಸ್ ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ನಾವು ಇದು ಸರಿಯಲ್ಲವೆಂದು ಹೇಳಿ ಮನವರಿಕೆ ಮಾಡುವ ಪ್ರಯತ್ನವನ್ನೂ ಕೂಡ ನಾವು ಮಾಡಿದ್ದೇವೆ. ರಾಜ್ಯಪಾಲರು ಆರ್ಡಿನೆನ್ಸ್ ಇಶ್ಯು ಮಾಡುವುದಕ್ಕೆ ಮುಂಚೆ 2ನೇ ತಾಲೀಖು ಭೇಟಿಯಾಗಿ ಒಂದು ಪತ್ರವನ್ನೂ ಕೂಡ ಕೊಟ್ಟಿದ್ದೆವು. ಇವರ ಆರ್ಡಿನೆನ್ಸ್ ಬಂದಿದ್ದು ಯಾವಾಗ ಸುಮಾರು 21ಕ್ಕೆ ಆದರೆ ಎರಡನೇ ತಾರೀಖು ಮೇ ನಾವು ಗೌರ್ನರ್‌ರವರಿಗೆ ಪತ್ರವನ್ನು ಕೊಟ್ಟಿದ್ದೆವು. ಅದರಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಎರಡು ನಿಮಿಷದೊಳಗೆ ಹೇಳುತ್ತೇನೆ.

"The Agricultural Marketing Committees were established in Karnataka before independence. These institutions were established with a whole purpose to save the farmers from exploitations by implementing the Marketing Regulation. Present Regulated Market Committee Act was enacted in the year 1966 and the same was implemented in the State against many odds and lack of infrastructure. There was a public opinion and also the pressure from Legislators that the Act needs amendments for effective implementation to save the farmers from exploitation in the market. Earlier though there were majority of ryot members in APMC Committees sitll they were strategically controlled or managed either by merchants or by Government nominees in many of the APMC's. The govt. having convinced the need for amendments, appointed a

Committee under the Chairmanship of Mr.Ajjibal Hegde, with stalwarts like late Sri K.H.Patil and present Law Minister Sri Nanaiah and others. The Committee after serious deliberations submitted its recommendations for amendment of the Act to facilitate APMC to function with more freedom and the necessary amendments were brought to APMC Act in the year 1991 to reduce the Government and merchants dominance in the APMCs managements.

SRI M.C.NANAIAH: One minute, Mr.Kharge....

(INTERRUPTIONS)

SRI M.C.NANAIAH: But, the view of the government was always different.

(INTERRUPTIONS)

SRI M.C.NANAIAH: What you did?

SRI M.MALLIKARJUN KHARGE: "Both the Houses of the Karnataka Legislature has passed the amendments unanimously. The then Opposition parties welcomed and appreciated the amendments. People who are concerned including the press appreciated the amendments.

The elections to APMCs were not held for more than 10 years. In vies of the directions of the High Court, the APMC elections were held in the month of April. In the recently held elections in majority of APMC the Cong(I) and other opposition parties have got the majority in spite of the fact that there were so many mistakes and omissions of Cong. pro-voters in the voters' list. In many areas polling booths were changed according to whims and fancies of the Janata Dal leaders. The ruling Janata Dal Government violated election norms and ethics.

In view of the facts that the Congress has got upperhand in majority of APMCs the desperate ruling party has now initiated to bring an ordinance to amend the Act to facilitate for nominating members of APMC Committee to help elect the Chairman of their own. This will totally negate the democractic verdict given by the farmers. Since the elections were held as per the existing Act, any amendment to change the structure of the Managing Committee after the elction results are announced, will be against the spirit of democracy and the people's voice. ಅದಕ್ಕೆ ನಾವು ಗೌರ್ನರ್‌ರವರನ್ನು ಕೇಳಿದ್ದು ಇದನ್ನು ತಾವು ಪುನರ್ ಪರಿಶೀಲನೆ ಮಾಡಿ ಏಕೆಂದರೆ ಚುನಾವಣೆಯಾದ ಮೇಲೆ ಬರುತ್ತಿದೆ. ಇಲ್ಲವೆಂದರೆ ಅಸೆಂಬ್ಲಿಯಲ್ಲಿ ತಂದು ಬೇಕಾದರೆ ಚರ್ಚೆಯಾದ ಮೇಲೆ, ಆಮೇಲೆ ಪ್ರೋಸ್ ಆ್ಯಂಡ್ ಕಾನ್ಸ್ ತಿಳಿದುಕೊಂಡು ಅವರು ತಂದಿದ್ದರೆ ಅದು ಒಂದು ಇರಬಹುದಾಗಿತ್ತು. ಆದರೆ ಇವತ್ತಿನ ದಿವಸ ತರಾತುರಿಯಲ್ಲಿ ತರುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ತಡೆ ಹಿಡಿಯಬೇಕೆಂದು ನಾವು ಗೌರ್ನರ್‌ರವರನ್ನು ಕೇಳಿಕೊಂಡಾಗ ಗೌರ್ನರವರು ಕೆಲವು ದಿವಸ ತಡೆ ಹಿಡಿದರು, ಪುನಃ ಯಥಾಪ್ರಕಾರ ಎಂ.ಸಿ.ನಾಣಯ್ಯನವರು ಹೋಗಿ ಅವರಿಗೆ ಸ್ವಲ್ಪ ಎಕ್ಸ್‌ಪ್ಲೇನ್ ಮಾಡಿದರು ಎಂದು ಕಾಣುತ್ತದೆ, ಮತ್ತು ಹೇಳಿಕೊಟ್ಟಿರಬೇಕು. ಏಕೆಂದರೆ ಸ್ವಲ್ಪ ನಾಣಯ್ಯನವರಿಗೆ ನ್ಯಾಕ್ ಇದೆ.

MR SPEAKER: Is it the same Nanaih who is referred to as statlwart here?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಮಾತ್ರ ಅವರಿಗೆ ಸ್ಟಾಲ್‌ವರ್ಟ್ ಎಂದು ಅನ್ನುತ್ತೇವೆ. He always refuses that he is not so. With all his vocabulary, oratory, he convinced. ಯಾವಾಗಲೂ ಅವರ ಕೆಟ್ಟ ಪದ್ಧತಿ ಏನೆಂದರೆ ಕೆಟ್ಟ ಕೇಸು ಹಿಡಿಯುವುದು ಅದರ ಪರವಾಗಿ ಆರ್ಗ್ಯುಮೆಂಟ್ ಮಾಡುವುದು ಫೇಲಾಗುವುದು. Always he is a good lawyer. He argues very vehemently, very nicely. He puts his arguments very systematically. ಅವರು ಯಾವಾಗಲೂ ಸಿಸ್ಟಮ್ಯಾಟಿಕ್. ಆದರೆ ಏನಾಗುತ್ತದೆ. ಕೇಸು ಕೆಟ್ಟು ಬಿದ್ದರೆ ಏನು ಮಾಡುವುದಕ್ಕಾಗುತ್ತದೆ. ಕಾನೂನು ಎಷ್ಟೇ ಒಳ್ಳೆಯದಾಗಿದ್ದರೂ ಕೂಡ ಅದಕ್ಕೆ ಸರಿಯಾದಂಥ ರೀತಿಯಲ್ಲಿ ಜನರಿಗೆ ಲಾಭ ಆಗತಕ್ಕಂಥದ್ದು ಮಾಡಿದರೆ ಸರಿ. ಆದರೆ ಅವರು ಏನು ಮಾಡುತ್ತಾರೆ ಎಂದರೆ ಅವರಿಗೆ ಹೇಗೆ ಬೇಕು ಹಾಗೆ ಇಂಟರ್‌ಪ್ರೆಟ್ ಮಾಡಿಕೊಂಡು ಹೋಗುತ್ತಾರೆ. ಜಡ್ಜ್‌ಮೆಂಟ್

ಸರಿಯಾಗಿ ಸಿಗುವುದಿಲ್ಲ. ಆದರೆ ಇವತ್ತು ಜನರೂ ಕೂಡ ಜಡ್ಜ್‌ಮೆಂಟ್ ಇವರ ಪರ ಕೊಟ್ಟಿಲ್ಲ. ಅದಕ್ಕೆ ಇವರ ವಿರುದ್ಧ ಜಡ್ಜ್‌ಮೆಂಟ್ ಇದೆ ಎಂದು ಹೇಳಿ ಈ ನಾಮಿನೇಷನ್ ಹಿಡಿದುಕೊಂಡು ಎ.ಪಿ.ಎಂ.ಸಿ. ಆಕ್ಟ್ ಅಮೆಂಡ್‌ಮೆಂಟ್ ಮಾಡಿ ಮೂರು ಜನರಿಗೆ ನಾಮಿನೇಟ್ ಮಾಡಬೇಕೆಂದು ಹೋಗುತ್ತಿದ್ದೀರಿ ಇದರಿಂದ ಪ್ರಜಾಪ್ರಭುತ್ವ ತತ್ವಕ್ಕೆ ಹೊಡೆತ ಆಗುತ್ತದೆ, ನಿಜವಾಗಿಯೂ ಇದು ಸರಿಯಲ್ಲ. ಅದರಲ್ಲೂ ಚುನಾವಣೆಯಾದ ಮೇಲೆ ಅವರು ತರತಕ್ಕಂಥ ಆರ್ಡಿನೆನ್ಸ್ ಏನಿದೆ ಇದು ಒಂದು ಕರಾಳ ಕಾನೂನು ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದಕ್ಕೆ ದಯಮಾಡಿ ತಮ್ಮ ಮುಖಾಂತರ, ತಮ್ಮ ಮಾತನ್ನು ಅವರು ಕೇಳುತ್ತಾರೆ ತಮ್ಮ ಮುಖಾಂತರ ಅವರಿಗೆ ಕಳಕಳಿಯಿಂದ ಕೇಳುತ್ತೇನೆ. ತಾವಾದರೂ ಬುದ್ಧಿ ಹೇಳಿ ಈಗಲಾದರೂ ವಿಥ್‌ಡ್ರಾ ಮಾಡಿಸುವುದಕ್ಕೆ ಮತ್ತು ಚುನಾವಣೆ ನಡೆಸುವುದಕ್ಕೆ ನ್ಯಾಯವಾಗಿ ಯಾರು ಬೇಕೋ ಅವರು ಬರಲಿ. ಅದರಲ್ಲಿ ನಮಗೆ ಏನು ಕಿರೀಟ ಬರತಕ್ಕಂಥದ್ದು ಇಲ್ಲ. ಅದರ ಮೇಲೆ ರಾಜ್ಯಸರ್ಕಾರ ಉಳಿದಿರತಕ್ಕಂಥದ್ದು ಅಲ್ಲ. ಆದರೆ ನ್ಯಾಯವಾಗಿ ಬರತಕ್ಕಂಥವರು ಯಾರಿಗೆ ರೆಪ್ರಸೆಂಟೇಷನ್ ಸಿಗಬೇಕು ಯಾರು ಅಧ್ಯಕ್ಷರು ಆಗಬೇಕು ಅವರು ಆದರೆ ಒಳ್ಳೆಯದಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ. ಈ ಒಂದು ಕಾನೂನು ವಾಪಸ್ಸು ತೆಗೆದುಕೊಳ್ಳಬೇಕು. ನಾಮಿನೇಷನ್ ರದ್ದು ಮಾಡಬೇಕು, ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆ ನಡೆಸಬೇಕೆಂದು ಹೇಳಿ ಕೇಳಿಕೊಳ್ಳುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ಬಹಳ ಹೊತ್ತು ಮಾತನಾಡುವಂಥದ್ದು ಏನು ಇಲ್ಲ ಸನ್ಮಾನ್ಯ ಖರ್ಗೆಯವರು ಎಲ್ಲಿ ತಿಳಿಸಿದ್ದಾರೆ, ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಇರುವಂಥವರು, ಚುನಾವಣೆಯ ಪದ್ಧತಿಯಲ್ಲಿ ನಂಬಿಕೆ ಇರುವಂತಹವರು ಮತದಾರನ ತೀರ್ಪು ಅಂತಿಮ ಎಂದು ಬಯಸಿರುವ ಯಾವುದಾದರೂ ಸರ್ಕಾರ ಈ ನಾಮಿನೇಷನ್ ಮಾಡುವಂತಹ ಕೆಟ್ಟ ಪದ್ಧತಿಯನ್ನು ಕೈಬಿಡಬೇಕೆಂದು ಹೇಳುವ ವ್ಯಕ್ತಿ ನಾನು. ದುರಾದೃಷ್ಟವೆಂದರೆ ನಮ್ಮ ಕಾಂಗ್ರೆಸ್ ಪ್ರತಿಪಕ್ಷದ ನಾಯಕರು ಖರ್ಗೆಯವರು ಮಾತನಾಡಿದರು. ಏಕೆ ಅವರ ಮಾತಿಗೆ ವೈಟ್ ಬರುತ್ತಾ ಇಲ್ಲ, ಏತಕ್ಕೋಸ್ಕರ ಅವರ ಮಾತಿಗೆ ನೀವು ಈಲ್ಡ್ ಆಗುವುದಿಲ್ಲ ನನ್ನಮ ನಿಮಗೆ ತಪ್ಪು ಎಂದು ಅನಿಸುವುದಿಲ್ಲವೆಂದರೆ ಇದೇ ನಡೆದುಕೊಂಡು ಬಹಳ ವರ್ಷಗಳಿಂದ ಅವರು ಏನು ಮಾಡಿದ್ದಾರೆ ನಾವೇನು ಮಾಡಿದ್ದೇವೆ, ಅವರು ಮಾಡಿದ್ದಾರೆ. ನಾವು ಈ ಮಾತನ್ನು ಅನೇಕ ಸಾರಿ ಕೇಳಿಕೊಂಡು ಬಂದಿದ್ದೇವೆ, ಅವರು ಏನೋ ಒಂದು ಹುಚ್ಚು ಯಾವುದೇ ಅಧಿಕಾರ ಯಾವುದೇ ಮಟ್ಟದಲ್ಲಿ ನಮ್ಮ ಕೈಯಲ್ಲಿಯೇ ಇರಬೇಕು ಎಂದು ಅಧಿಕಾರಕ್ಕೆ ಬಂದಂಥ ಪಕ್ಷಗಳು ಯೋಚನೆ ಮಾಡುವಂಥ ಈ ಕೆಟ್ಟ ಪದ್ಧತಿಯನ್ನು ನಾವು ಕೈಬಿಟ್ಟಾಗ ಈ ವ್ಯವಸ್ಥೆಗೆ ಒಂದು ಅರ್ಥ ಬರಬಹುದು. ಕೋ-ಆಪರೇಟಿವ್ ಸಚಿವರು ಮಾತನಾಡುವ ಕಾಲದಲ್ಲಿ ನಾವು

ಕೇಳಿಯೇ ಇರಲಿಲ್ಲ. ಎಲ್ಲಾ ಸಭೆಗಳಲ್ಲಿ ಮಾತನಾಡಿದ್ದೇನೆಂದು ಹೇಳಿದರು. ಯಾವುದೇ ಕಾರಣಕ್ಕೂ ನಾಮಿನೇಷನ್ ನನಗೆ ಇಷ್ಟವಿಲ್ಲ, ನಂಬಿಕೆ ಇಲ್ಲ ಎಂದು. ನಾಣಯ್ಯನವರು ಹೇಳಿದರು. ಇದಕ್ಕೆ ವೈಯಕ್ತಿಕವಾಗಿ ಇದಕ್ಕೆ ನನ್ನ ವಿರೋಧ ಇದೆ ಎಂದು ಯಾರು ಜೀವನಪರ್ಯಂತ ನಾಡಿನ ಜನತೆಗೆ ಕೆಲವು ಮಾತುಗಳನ್ನು ಹೇಳಿಕೊಂಡು ಬರುತ್ತಿದ್ದೇವೆ, ಅಧಿಕಾರ ಸಿಕ್ಕಾಗ ಸ್ಥಾನಮಾನ ಸಿಕ್ಕಾಗ ಅದನ್ನು ಚಲಾವಣೆ ಮಾಡಿದಾಗ ಮಾತ್ರ ಅದಕ್ಕೆ ಅರ್ಥ ಬರುತ್ತದೆ ಇಲ್ಲವೇ ಅನಿವಾರ್ಯವಾಗಿ ನಾವು ಈ ಆಡಳಿತದಲ್ಲಿದ್ದೇವೆ ಅದಕ್ಕೋಸ್ಕರ ಸರ್ಕಾರದ ನಿಲುವು ಅದು. ವೈಯಕ್ತಿಕ ಬೇರೆ ಇದು ಹೇಳುವುದಕ್ಕೆ ಬರುವುದಿಲ್ಲ ಜವಾಬ್ದಾರಿ ಇರುವಂಥಹ ವ್ಯಕ್ತಿಗಳು ಮಾತ್ರ. ಇನ್ನೊಂದು ಏನಾಗಿದೆ ಚುನಾವಣೆಯಾಗಿ 4 ತಿಂಗಳಾಯಿತು. ಏನು ಅಪರಾಧ ಮಾಡಿದ್ದೇವೆ? ಗೆದ್ದಂತವರು ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನದಲ್ಲಿ ಕುಳಿತು ಕೆಲಸ ಮಾಡುವಂಥ ವ್ಯವಸ್ಥೆ ಏನು ಇತ್ತು, ಅವನ ಅಧಿಕಾರ ಏನು ಇತ್ತು ಅದಕ್ಕೆ ಕೊಡಲಿ ಪೆಟ್ಟಾಗುವಂತಹ ಕೆಲಸವನ್ನು ಮಾಡಿದ್ದಾರೆ.

4.00 ಪಿ.ಎಂ.

ಕೋರ್ಟಿಗೆ ಹೋಗಿ ಏನಾದರೂ ಮಾಡಿ ನಾವು ನಾಮಿನೇಷನ್ ಮಾಡಿಕೊಂಡು ಬರಬೇಕೆಂಬ ಕೆಟ್ಟ ಹಠ ಬಂತು. ಸಂಬಂಧಪಟ್ಟ ಮಂತ್ರಿಗಳು ಇದನ್ನು ಚಿಂತನೆ ಮಾಡಬೆಕು. ತಾವೇ ಹೇಳಿರುವ ಪ್ರಕಾರ ಎಲ್ಲಾ ವರ್ಗದ ಜನರಿಗೂ ಎಸ್ ಸಿ.ಎಸ್.ಟಿಗೂ ಮಹಿಳೆಯರಿಗೂ ಕೊಟ್ಟಿದ್ದೇವೆಂದು ಅದ ಮೇಲೂ ಸಹ ಯಾವುದೋ ಕೇಟಗರಿಗೆ ಅನ್ಯಾಯವಾಗಿದೆ ಅದಕ್ಕೋಸ್ಕರ ನಾವು ಈ ನಾಮಿನೇಷನ್ ಮಾಡುತ್ತೇವೆಂದು ಹೇಳಿದರೆ ಅದಕ್ಕೊಂದು ಅರ್ಥ ಇದೆ. ಎಲ್ಲಾ ವರ್ಗದ ಜನರಿಗೂ ಅವಕಾಶ ಮಾಡಿಕೊಟ್ಟ ಮೇಲೂ ಸಹ ಯಾವುದೋ ಮೊಂಡ ಹಠದಿಂದ ಈ ರೀತಿ ನಾಮಿನೇಷನ್ ಮಾಡುವಂತಹ ಕೆಲಸಕ್ಕೆ ನೀವು ಕೈ ಹಾಕಿದ್ದೀರಿ. ಇದರ ಪರಿಣಾಮವೇನು? ನಾವು 39 ಜನ ಶಾಸಕರಿದ್ದೇವೆ ಎಲ್ಲರೂ ಬಂದು ನಾಮಿನೇಷನ್ ಮಾಡುವುದಕ್ಕೆ ಹೇಳಿ ನಾವೂ ಬರುತ್ತೇವೆ ಎಂದು ಹೇಳುತ್ತಾರೆ. ಚುನಾವಣೆಯಲ್ಲಿ ಜನರನ್ನು ಎದುರಿಸಿ ಗೆದ್ದು ಬರುವಂತಹ ಒಂದು ಅವಕಾಶ ನಮಗೆ ಸಿಗಬೇಕು ಆ ಪರಿಪಾಠವನ್ನು ನಮ್ಮ ಕಾರ್ಯಕರ್ತರಿಗೆ ಕಲಿಸಬೇಕೇ ಹೊರತು ಯಾವುದೋ ಹಿಂಬಾಗಿಲಿನಿಂದ ನಾನೂ ಒಬ್ಬ ಎಪಿಎಂಸಿ ಸದಸ್ಯ ಟಿಎಪಿಸಿಎಂಸಿ ಡೈರೆಕ್ಟರ್ ನನಗೆ ಸ್ಥಾನ ಮಾನ ಸಿಕ್ಕಿದೆ ಎಂದು ಹೇಳುವಂತಹ ಕೆಟ್ಟ ಖಾಯಿಲೆ ಏನು ಇದೆ, ಇದು ಮಾರಕವಾಗಿರುವಂಥಾದ್ದು. ನಿಮಗೆ ಅಧಿಕಾರದಲ್ಲಿದ್ದಾಗ ಅದು ಸರಿಯಾದ ರೀತಿಯಲ್ಲಿ ಕಂಡರೂ ಸಹ ಎಲ್ಲಿಯಾದರೂ ಇದರ ಬಗ್ಗೆ ಚಿಂತನೆ ಮಾಡಿ ಇದಕ್ಕೆ ಕೊನೆ ಮಾಡುವ ಪ್ರಯತ್ನವಾಗಬೇಕು. ಒಂದು ಮಾತನ್ನು ಒಪ್ಪುತ್ತೇನೆ ಅನಿವಾರ್ಯವಾಗಿ ನಾಮಿನೇಷನ್ ಮಾಡಿದಾಗ ಕೆಲಸ ಮಾಡುವುದಕ್ಕೆ ಅವಕಾಶ ಸಿಗಬೇಕೆಂದಾಗ ಈ ವೋಟಿಂಗ್ ಪದ್ಧತಿ ಏನು ಇದೆ ಈ ಅಧಿಕಾರಿ ಕೊಡುವಂಥಾದ್ದು ಸರಿಯಲ್ಲವೆಂಬುದು ನನ್ನ ಸ್ಪಷ್ಟವಾದ

ಭಾವನೆ. ಈಗಲಾದರೂ ದಯಮಾಡಿ ಅನಿವಾರ್ಯವಾಗಿ ಏನು ನಾಮಿನೇಷನ್ ಮಾಡಿದ್ದೀರಿ ಇದು ಸರಿಯಲ್ಲ ಇನ್ನು ಮುಂದಾದರೂ ಈ ನಾಮಿನೇಷನ್ ಅನ್ನು ರದ್ದು ಮಾಡಬೇಕು. ನಮ್ಮ ಕಾಂಗ್ರೆಸ್‌ನ ಸ್ನೇಹಿತರಿಗೆ ಹೇಗೆ ಹೇಳಬೇಕೋ ನನಗೆ ಅರ್ಥವಾಗುತ್ತಿಲ್ಲ. ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವರಿಗಂತೂ ನೈತಿಕ ಹಕ್ಕೆ ಇಲ್ಲವೆಂದು ಹೇಳುವ ವ್ಯಕ್ತಿ ನಾನು. ನಾವು ಏನು ಮಾಡುತ್ತೇವೆ ಇನ್ನೊಬ್ಬರೇನು ಮಾಡುತ್ತಾರೆಂದು ಚರ್ಚೆ ಮಾಡುವುದಕ್ಕಿಂತ ನಾವು ಅದನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರಬೇಕು. ಕೋ ಆಪರೇಟೀವ್ ಸೊಸೈಟಿಗಳು ಇರಬಹುದು ಸಕ್ಕರೆ ಕಾರ್ಖಾನೆಗಳು ಇರಬಹುದು. ಉದಾಸಿಯವರೇ ಹೋಗಿ ಕೋರ್ಟಿಗೆಲ್ಲಾ ಹೋಗಿ ಬಂದದ್ದಂತಹ ಕತೆಗಳನ್ನು ನಾನು ಕೇಳಿದ್ದೇನೆ. ಆಡಳಿತಮಾಡುವಂತಹ ಎಲ್ಲರಿಗೂ ಈ ಖಾಯಿಲೆ ಇದೆ. ಇದಕ್ಕೇನಾದರೂ ಕೊನೆ ಮಾಡಿ ಮಂಗಳ ಹಾಡುವಂತಹ ನಿಮ್ಮ ಕಾಲದಲ್ಲಿ ಆಗುತ್ತದೆಂದು ಜನ ನಿರೀಕ್ಷೆ ಮಾಡಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧಿಕಾರವಿಲ್ಲವೆಂದು ಹೇಳುವುದಕ್ಕೆ ಯಾರಿಗೂ ಹಕ್ಕು ಇಲ್ಲ. ಏಕೆಂದರೆ ಕಾನೂನಿನಲ್ಲಿ ಅವಕಾಶವಿದ್ದರೆ ಎಲ್ಲರೂ ಮಾಡುತ್ತಾರೆ. ಆದರೆ ಕಾನೂನು ತೆಗೆದು ಹಾಕಿದಾಗ ಯಾರೂ ಮಾಡುವುದಕ್ಕೆ ಹೋಗುವುದಿಲ್ಲ. ವೈಯಕ್ತಿಕ ಹಕ್ಕು ಇಲ್ಲವೆಂದರೆ ಯಾರ ಮನೆ ಲೂಟಿ ಹೊಡೆದಿದ್ದೀನಾ ಕಳ್ಳತನ ಮಾಡಿದ್ದೇನಾ ಸಕ್ಕರೆ ಕಾರ್ಖಾನೆ ಲೂಟಿ ಮಾಡಿದ್ದೇನಾ? ನೈತಿಕ ಹಕ್ಕು ಇಲ್ಲವೆಂದು ಹೇಳಬೇಡಿ. ಕಾನೂನಿನಲ್ಲಿ ಅವಕಾಶವಿದ್ದಾಗ ನಾವು ಮಾಡಿದ್ದೇವೆ. ತಪ್ಪೋ ಸರಿಯೋ ನಿಯಮ ಇತ್ತು ಅದರಂತೆ ನಡೆದುಕೊಂಡಿದ್ದೇವೆ. ಆದರೆ ಇಲ್ಲಿ ಅವಕಾಶವಿಲ್ಲದಿದ್ದರೂ ಕೂಡ ಅವಕಾಶ ಮಾಡಿಕೊಂಡು ಮಾಡುತ್ತಿದ್ದೀರಲ್ಲಾ, ಅದಕ್ಕಾಗಿ ನಾನು ಹೇಳಿದ್ದು. ತಾವು ದಯವಿಟ್ಟು ಅದನ್ನು ನನಗೆ ಹೇಳಬೇಡಿ. ನಿಮ್ಮಲ್ಲಿ ಎಷ್ಟು ಗೌರವವಿದೆ ಅಷ್ಟೇ ಗೌರವ, ನೈತಿಕ ಹಕ್ಕು ನನ್ನ ಹತ್ತಿರವೂ ಇದೆ ಎದುರಿಸತಕ್ಕಂತಹ ಶಕ್ತಿಯೂ ಇದೆ.

ಶ್ರೀ ಸಿ.ಎಂ.ಉದಾಸಿ: 18 ಸ್ಥಾನಗಳಿಗೆ ಚುನಾವಣೆ ನಡೆದು 15 ಸ್ಥಾನಗಳನ್ನು ನಾವು ಗೆದ್ದಿರಬೇಕಾದರೆ 3 ಸ್ಥಾನ ಗೆದ್ದವರು 11 ನಾಮಿನೇಷನ್ ಮಾಡಿ ಒಬ್ಬರನ್ನು ಅದರಲ್ಲಿ ಖರೀದಿ ಮಾಡಿಕೊಂಡು ಅಧ್ಯಕ್ಷ ಸ್ಥಾನದಲ್ಲಿ ಕೂರುವುದಕ್ಕೆ ಹೋಗುತ್ತಿದ್ದರೆ ಮಾನ್ಯ ಯಡಿಯೂರಪ್ಪನವರು ಹೇಳುತ್ತಿರುವ ಮಾತಿಗೆ ಮನ್ನಣೆ ಬರುತ್ತದೆಯೇ ಅಥವ ಇಲ್ಲವೇ ಎಂದು ತಾವು ಅವರಿಗೆ ತಿಳುವಳಿಕೆ ನೀಡಬೇಕು.

ಶ್ರೀ ಎಂ.ಸಿ.ನಾಣಯ್ಯ: ಯಾವ ಕಾನೂನಿನಲ್ಲೀ ಅವಕಾಶ ಇತ್ತು ಅದನ್ನು ನೀವೇ ಹೇಳಿಬಿಡಿ. 11 ಮಾಡಲಿಕ್ಕೆ ಯಾವ ಕಾನೂನಿನಲ್ಲಿ ಅವಕಾಶ ಇತ್ತು ಹೇಳಿಬಿಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವ ಕಾನೂನು ಕೋರ್ಟಿಗೆ ಹೋಗಿ ಏನಾದರೂ ಇದ್ದರೆ ಮಾಡಬೇಕಲ್ಲಾ. ಲಾ ಡಿಪಾರ್ಟ್‌ಮೆಂಟ್ ನಿಮ್ಮಲ್ಲೇ ಇದೆ. ರಿಜಿಸ್ಟರ್ ನಿಮ್ಮಲ್ಲೇ ಇದೆ. ಯಾವ ಕಾನೂನು ಪ್ರಕಾರ ರೆಕಮೆಂಡ್ ಮಾಡುತ್ತೀರಿ ಹೇಳಿ.

ಶ್ರೀ ಎಂ.ಸಿ.ನಾಣಯ್ಯ: ಸುಪ್ರೀಂ ಕೋರ್ಟನವರು ನಿಮಗೆ ಮಾಡಲಿಕ್ಕೆ ಅಧಿಕಾರವಿಲ್ಲವೆಂದು ಹೇಳಿದರಲ್ಲಾ. ಹೋಗಬೇಕಾಯಿತು. ನೀವು ಅಲ್ಲಿಯವರೆಗೆ ಕರೆಸಿದಿರಿ. ಯಡಿಯೂರಪ್ಪನವರೇ ದಯವಿಟ್ಟು ಹೇಳುತ್ತೇನೆ. 11 ಜನರನ್ನು ನಾಮಿನೇಟ್ ಮಾಡಿದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದನ್ನು ಈಗ ಚರ್ಚೆ ಮಾಡುವುದು ಬೇಡ. ಅದಕ್ಕೆ ಬೇರೆ ಅವಕಾಶ ಮಾಡಿಕೊಡಿ ಅರ್ಧ ಗಂಟೆ ಅವಕಾಶ ಕೊಡಿ. ನಾನೂ ಮೆಟೀರಿಯಲ್ಸ್ ಕಲೆಕ್ಟ್ ಮಾಡುತ್ತೇನೆ. ಯಾವ ಸಂಧರ್ಭದಲ್ಲಿ ಯಾವ್ಯಾದ ಜಾಗದಲ್ಲಿ ಆಗಿದೆ ಎಂದು ವಿಚಾರ ಮಾಡೋಣ. 10 ವರ್ಷದ್ದನ್ನು ಈಗ ಹೇಳಿದರೆ ಗೊತ್ತಾಗುವುದಿಲ್ಲ. 5 ವರ್ಷದ ರೆಕಾರ್ಡ್ಸ್ ಅನ್ನು ನಾನು ಹುಡುಕಿಕೊಂಡು ಬರಲಿಕ್ಕಾಗುವುದಿಲ್ಲ. ನನಗೆ ಅಧಿಕಾರ ಇಲ್ಲ. ಅವಕಾಶ ಮಾಡಿಕೊಡಿ. Let us have a separate discussion. I will deny it. How we have done, I will show you. ಆದರೆ ಈಗ ತಕ್ಷಣ ಕೇಳಿದರೆ ನಾನು ಹೇಳಲು ಕಷ್ಟವಾಗುತ್ತದೆ. ಮುಂಜಾನೆ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುವುದಕ್ಕೆ ಬೇಗನೆ ಬರುವುದಿಲ್ಲ 4 ವರ್ಷದ ರೆಕಾರ್ಡ್ಸ್ ತಂದು ಹೇಳಿ ಅಂದರೆ ನಾನು ಏನು ಹೇಳಲಿ ಅವಕಾಶ ಮಾಡಿಕೊಡಿ, ನಾನೂ ಬರುತ್ತೇನೆ ಹೇಳೋಣ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರು ಬಹಳ ದೊಡ್ಡ ಔದಾರ್ಯವನ್ನು ತೋರಿದ್ದಾರೆ. ನಿನ್ನೆ 19ನೇ ತಾರೀಖು ಕಾಲಿಂಗ್ ಅಟೆನ್ಷನ್ ಎಂದು ಹೇಳಿ ಇವತ್ತೇ ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಚರ್ಚೆಗೆ ಇವತ್ತು ಬಂದಿತ್ತು ನಾವು ಅದಕ್ಕೆ ತಯಾರಾಗಿದ್ದೆವು. ಮೌಲ್ಯಗಳು, ಪ್ರಜಾಪ್ರಭುತ್ವದ ಕಗ್ಗೊಲೆ, ನೀವು ಮಾಡುತ್ತಿರತಕ್ಕಂಥಾದ್ದು ಕರಾಳವಾಗಿರತಕ್ಕಂತಹ ಶಾಸನವೆಂದು ಯಾವುದು ಹೇಳಿಕೊಂಡು ಬಂದಿರಿ ಅದಕ್ಕೆ ಮಾತ್ರ ಸೀಮಿತವಾಗಿ ನನ್ನ ಮಾತು. ಬಾಕಿ ಯಾವುದೂ ನಾನು ಹೇಳುವುದಿಲ್ಲ. ತಾವು ಪಕ್ಷದಲ್ಲಿದ್ದಾಗ ಯಾವುದನ್ನು ಮಾಡಿದಿರಿ, ಅದನ್ನೇ ಈ ಆಡಳಿತ ಪಕ್ಷದವರು ಇವತ್ತು ಈ ರೀತಿಯ ಒಂದು ತಿದ್ದುಪಡಿಯನ್ನು ತರುವುದರ ಮೂಲಕ ಮಾಡಿದ್ದಾರೆಂದು ಮಾನ್ಯ ಯಡಿಯೂರಪ್ಪನವರು ಹೇಳುತ್ತಿದ್ದಾರೆ. ಮಾನ್ಯ ಖರ್ಗೆಯವರು ಈ ಪ್ರಶ್ನೆಯನ್ನು ಎತ್ತಿ ಇದೊಂದು ಕರಾಳವಾಗಿರತಕ್ಕಂತಹ ಶಾಸನ ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಹೇಳುವುದಕ್ಕೆ ಮಾತ್ರ ಸೀಮಿತವಾಗಿ ನೈತಿಕ ಹಕ್ಕು ಇಲ್ಲವೆಂದು ಹೇಳಿದರು. ಅದು ಸ್ವಲ್ಪ ಮಟ್ಟಿಗೆ ಸರಿ ಎಂದು ಅನ್ನಿಸುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಹಿರಿಯ ಸದಸ್ಯರಾದ ಖರ್ಗೆಯವರ ಮನಸ್ಸಿಗೆ ನೋವು ಮಾಡಬೇಕೆಂದು ನನಗೆ ಅಪೇಕ್ಷೆ ಇಲ್ಲ ನನಗೆ ಅವರ ಬಗ್ಗೆ ಬಹಳ ಗೌರವ ಇದೆ. ಇಷ್ಯೂಸ್ ಏನು...

ಶ್ರೀ ಕೆ.ವಿ.ಸದಾನಂದಗೌಡ: ಇನ್ನಷ್ಟು ವಿಶೇಷ ಸಂಗತಿಗಳು ಇವೆ. ನಾಮಿನೇಷನ್

ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಒಂದು ಉದಾಹರಣೆಯನ್ನು ಹೇಳುತ್ತೇನೆ. ಯಾರು ಇದರ ಪರವಾಗಿ ಇದರ ವಿರುದ್ಧವಾಗಿ ಮಾತನಾಡುತ್ತಿದ್ದಾರೆ ಇಂತಹ ಒಂದು ಸಂಗತಿ ದಕ್ಷಿಣ ಕನ್ನಡ ಜಿಲ್ಲೆಯ ಜನತಾ ಬಜಾರಿನಲ್ಲಿ ಆಗಿದೆ. ಇವರಿಬ್ಬರಿಗೆ ಸೇರಿದ ಒಬ್ಬರು ಆರಿಸಿ ಬಂದರು ಬೇರೆ 8 ಜನ ಬೇರೆಯವರು ಆರಿಸಿ ಬಂದರು. 9 ಜನರನ್ನು ನಾಮಿನೇಷನ್ ಮಾಡಿ ಇವರಿಬ್ಬರೂ ಒಟ್ಟಿಗೆ ಸೇರಿ ಅಲ್ಲಿ ಆಡಳಿತ ಮಾಡುವ ಹುನ್ನಾರ ಮಾಡಿದ್ದಾರೆ ಇವರಿಬ್ಬರಿಗೆ ನೈತಿಕ ಹಕ್ಕು ಏನು ಇದೆ ಎಂದು ಪ್ರಶ್ನೆ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ವಿರೋಧ ಪಕ್ಷದ ನಾಯಕರು ಎದ್ದು ನಿಂತಾಗ ನಾನು ಯೀಲ್ಡ್ ಆಗುವುದು ನನ್ನ ಕರ್ತವ್ಯವೆಂದು ತಿಳಿದು ನಾನು ಕುಳಿತೆ. ವೈಯಕ್ತಿಕವಾಗಿ ನಾನು ಖರ್ಗೆಯವರ ಮನಸ್ಸಿಗೆ ನೋವು ಮಾಡಬೇಕೆಂದು ನನ್ನ ಅಪೇಕ್ಷೆ ಇಲ್ಲ. ಒಂದು ಪಕ್ಷವಾಗಿ ತಾವೇನು ಹಿಂದೆ ಅಧಿಕಾರದಲ್ಲಿದ್ದಾಗ ಮಾಡಿದಿರಿ ಎಂದು ಇವರು ಮಾಡುತ್ತಿರುವುದನ್ನು ಸರಿ ಎಂದು ಹೇಳುತ್ತಿಲ್ಲ. ನಮ್ಮವರೂ ಶಾಸಕರು ಇದ್ದಾರೆ. ನಾವೂ ಕೆಲವು ಕಡೆ ಗೆದ್ದಿದ್ದೇವೆ. ನಮ್ಮವರೂ ಒಬ್ಬ ಇಬ್ಬರು ಇರಬೇಕೆಂದು ಅಪೇಕ್ಷೆ ಪಡುತ್ತಾರೆ. ಈ ರೋಗ ಏನು ಇದೆ, ಇದನ್ನು ಖಂಡಿತವಾಗಿ ಕೊನೆ ಮಾಡುವ ಕೆಲಸ ಮಾಡಬೇಕು. ಎಲ್ಲದರಲ್ಲೂ ನಾವೇ ಅಧಿಕಾರದಲ್ಲಿ ಇರಬೇಕೆನ್ನುವ ಹೆಚ್ಚಾಗಿ ಕೆಲವು ಕಡೆ ಕಾಂಗ್ರೆಸ್ ಬಿಜೆಪಿಯವರಿಗೆ ಇದ್ದರೆ ಅದು ಮಾದರಿಯಾಗುತ್ತದೆ. ನೀವು ಮಾಡುತ್ತೀರಿ. ಅದಕ್ಕೆ ಕಾಂಪಿಟಿಷನ್ ಇರಬೇಕಲ್ಲಾ. ಅದರ ಬದಲು ಯಾರೇ ಅಧಿಕಾರಕ್ಕೆ ಬರಲಿ ಎನ್ನುವ ಮನಸ್ಸು ಇರಬೇಕು. ಅದರ ಬದಲು 4.5 ಜನರನ್ನೂ ಹಾಕಿ ನಾವೇ ಅಧಿಕಾರದಲ್ಲಿ ಬರಬೇಕೆನ್ನುವ ಹುಚ್ಚು ಈ ಪ್ರಯತ್ನವೇನು ಇದೆ ಇದೆಲ್ಲಕ್ಕೂ ಮಂಗಳ ಹಾಡೋಣ ಕೊನೆ ಮಾಡೋಣವೆಂದು ನನ್ನ ಅಪೇಕ್ಷೆ. ಚುನಾವಣೆ ಇದೆ. ಗೆದ್ದಿರುವವರು ಕೈ ಕಟ್ಟಿಕೊಂಡು ಕುಳಿತಿದ್ದಾರೆ. ಎ.ಪಿ.ಎಂ.ಸಿ. ಡೈರೆಕ್ಟರ್‌ಗಳು ನಮ್ಮನ್ನು ಕೇಳುತ್ತಾರೆ. ಜನ ಆಯ್ಕೆಮಾಡಿದಂತಹ ಆ ಜನರು ಕಚೇರಿಯನ್ನೇ ನೋಡಿಲ್ಲ ಅವರಿಗೆ ಬೇಕಾದ ಅಧ್ಯಕ್ಷ ಉಪಾಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳುವ ಹಾಗಿಲ್ಲ. ಅನೇಕ ವರ್ಷಗಳು ಚುನಾವಣೆ ಮಾಡದೇ ವ್ಯವಸ್ಥೆಗಳು ಹಾಳಾಗಿವೆ. ಸರಿ ಮಾಡೋಣವೆಂದು ಅವರು ಕಳಕಳಿಯಿಂದ ಬಂದರೆ ಆ ಉತ್ಸಾಹಕ್ಕೆ ಭಂಗ ತರುವಂತಹ ಕೆಲಸ ನಾಮಿನೇಷನ್ ಹಾವಳಿಯಿಂದಾಗಿದೆ. ಕೂಡಲೇ ಚುನಾವಣೆಯಾಗಬೇಕು. ಒಂದು ವೇಳೆ ನಾಮಿನೇಷನ್ ಆಗಲೇಬೇಕೆನ್ನುವ ಒತ್ತಾಯ ಇದ್ದರೆ ಹಿಂದೆ ಮಾಡಿದರು ನಾವು ಮಾಡುತ್ತೇವೆಂದು ಹೇಳಿದರೆ ಕಡೇ ಪಕ್ಷ ವೋಟಿಂಗ್ ಅಧಿಕಾರವನ್ನು ತೆಗೆದು ಹಾಕಿ ಕೂಡಲೇ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಾಗುವ ವ್ಯವಸ್ಥೆ ಮಾಡಬೇಕು. ಮಾನ್ಯ ಖರ್ಗೆಯವರ ಮಾತಿಗೆ ನನ್ನದು ಸಂಪೂರ್ಣ ಬೆಂಬಲ ಇದೆ. ಪ್ರಜಾತಂತ್ರ ವಿರೋಧಿ ನೀತಿ ಇದು ಎನ್ನುವಂಥಾದ್ದು ರಾಜಕೀಯ ಲಾಭಕ್ಕೋಸ್ಕರ ಮಾಡುತ್ತಿರುವುದು ಎನ್ನುವುದರಲ್ಲಿ ಇಲ್ಲಿ ಕುಳಿತಿರುವವರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಆದರೆ ಅವರು ಮಾಡುತ್ತಿರುವುದನ್ನೇ ನೀವೂ ಮಾಡುತ್ತಿದ್ದೀರಿ ಇದರಲ್ಲಿ ಏನೂ ವ್ಯತ್ಯಾಸವಿಲ್ಲ.

ಪರಿಸ್ಥಿತಿ ಜನ ಒಂದು ರೀತಿಯಲ್ಲಿ ನಗೆಪಾಟಲಾಗುವಂತಾಗಿದೆ. ಅದನ್ನು ನಿಮ್ಮ ಕಾಲದಲ್ಲಿಯಾದರೂ ಕೊನೆ ಮಾಡಿ. ಹಿಂದಿನ ಆ ಕಲ್ಚರ್ ಬೇಡವೆಂದು ಜನ ತೀರ್ಮಾನ ಮಾಡಿ ಹಿಂದಿನ ವ್ಯವಸ್ಥೆ ಬೇಡವೆಂದು ನಿಮ್ಮನ್ನು ಜನ ತಂದು ಕೂರಿಸಿದರು. ನಾವೂ ಅವರು ಮಾಡಿದ್ದನ್ನೇ ಮುಂದುವರೆಸುತ್ತೇವೆಂದು ಹೇಳುವುದಾದರೆ ಏಕೆ ಈ ಬದಲಾವಣೆ ಬೇಕಾಗಿತ್ತು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರನ್ನು ಹುಟ್ಟಿಸಿದವರೇ ನೀವು, 83 ರಲ್ಲಿ 18 ಜನ ಸಪೋರ್ಟ್ ಮಾಡದಿದ್ದರೆ ಅವರು ಹುಟ್ಟುತ್ತಲೇ ಇರಲಿಲ್ಲ, ಅವರಿಗೆ ನೀರು ಬೀಜ ಹಾಕಿ ಬೆಳೆಸಿ ಮೇಲೆ ಎತ್ತಿದ್ದಿವರು ನೀವೇ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈ 50 ವರ್ಷದಲ್ಲಿನ ಕರ್ಮ ಕತೆ ನೋಡಿದರೆ ನಿಮಗಿಂತ ಯಾರಾದರೂ ಚೆನ್ನಾಗಿ ಕೆಲಸ ಮಾಡಬಹುದೆನ್ನುವ ತೀರ್ಮಾನಕ್ಕೆ ನಾವು ಬಂದೆವು. ಈಗ ನಾವು ಎಲ್ಲಿಗೆ ಬಂದಿದ್ದೇವೆ ಎಂದರೆ ಒಂದು ಸಾರಿ ಸ್ವರ್ಣ ಜಯಂತಿ ಆಚರಿಸುವ ಈ ಕಾಲದಲ್ಲಿ ಜನರಿಗೆ ನೆಮ್ಮದಿ ಸಿಗಬೇಕು. ಈ ಅಧಿವೇಶನ ಮುಗಿದ ತಕ್ಷಣ ರಾಜ್ಯದ ಉದ್ದಗಲಕ್ಕೂ 50 ವರ್ಷದಲ್ಲಿ 45 ವರ್ಷ ರಾಜ್ಯದ ವ್ಯವಸ್ಥೆಯನ್ನು ಬುಡಮೇಲು ಮಾಡಿದಂತಹ ಕಾಂಗ್ರೆಸ್ ಸಂಸ್ಕೃತಿಯನ್ನು ಕಿತ್ತು ಹಾಕಿ ಬದಲಾವಣೆ ತನ್ನಿ ಎಂದು ಜನರ ಹತ್ತಿರ ಹೋಗುತ್ತೇವೆ. ನಮ್ಮ ದೃಷ್ಟಿಯಿಂದ ಕಾಂಗ್ರೆಸ್ ಜನತಾ ದಳಕ್ಕೆ ಏನೂ ಬದಲಾವಣೆ ವ್ಯತ್ಯಾಸವಿಲ್ಲ. ನೀವು ಬೇರೆ ಎಂದು ನಾವು ತಿಳಿದುಕೊಂಡೆವು. ಜಯಪ್ರಕಾಶ ನಾರಾಯಣರವರ ನೇತೃತ್ವದ್ದು ಹೋರಾಟ ಮಾಡಿದಾಗ ನಾವಿಬ್ಬರೂ ಒಟ್ಟಿಗೆ ಇದ್ದೆವು. ಒಂದು ಸಾರಿ ಈ ವ್ಯವಸ್ಥೆಯನ್ನು ಕಿತ್ತು ಒಗೆದೆವಲ್ಲಾ, ನಿಮ್ಮನ್ನು ಕಿತ್ತು ಒಗೆಯುವುದು ಬಹಳ ತಡ ಇಲ್ಲ. ಆದರೆ ಇವರನ್ನು ಕಿತ್ತು ಒಗೆದೆವಲ್ಲಾ ಎನ್ನುವ ಸಮಾಧಾನ ಇದೆ. ಜನರಿಗೂ ಸಮಾಧಾನ ಇದೆ. ಅದನ್ನು ಮುಂದುವರಿಸುಂಥ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಯಡಿಯೂರಪ್ಪನವರೇ, ರಾಜಕೀಯದ ಭಾಷಣ ಬೇಕು ಎಂದು ಹೇಳಿದರೆ ಬಿಜೆಪಿಯವರ ನಿಮ್ಮ ಇವತ್ತಿನ ಈ ರಾಜಕೀಯವಾಗಿರುವ ಸೈದ್ಧಾಂತಿಕ ನಿಲುವು ಬಗ್ಗೆ ನಾವು ದೆಹಲಿಯಿಂದ ಹಿಡಿದು ಉತ್ತರಪ್ರದೇಶ, ಗುಜರಾತ್, ಮಹಾರಾಷ್ಟ್ರ, ಪಂಜಾಬ್ ಎಲ್ಲಾ ಕಡೆ ನೀವು ಹೋಗಿ ಹೋಗಿ ಎಲ್ಲಿಗೆ ತಲುಪಿದ್ದೀರಿ ಎಂದು ಹೇಳಿದರೆ, ದೇಶವನ್ನು ವಿಭಜನೆ ಮಾಡುವ....

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಖಂಡಿತವಾಗಿ ಅದರಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಕಾಂಗ್ರೆಸ್ ಇದ್ದಾಗ ಯಾವುದನ್ನು ಮಾಡುತ್ತಿದ್ದರೋ ಅದನ್ನು ನೀವು ಮುಂದುವರಿಸುತ್ತಿದ್ದೀರಿ ಅದು ಮುಂದುವರೆಯಲಾರದು. ಆದರೆ ನೀವು ಇಲ್ಲಿಗೆ ಬಂದಾಗ ಪುನಃ ಅದು ಮುಂದುವರೆಯುತ್ತದೆ. ಅದೇನೂ ನಿಲ್ಲುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮಗೆ ಇವರಿಗಿಂತ ನೀವು ಇರುವುದು ನಮಗೆ ಏನೂ ಚಿಂತೆ ಇಲ್ಲ. ಮೊದಲೇ ಈ ಒಂದು ನಾಡಿನ ಜನರಿಗೆ, ದೇಶದ ಜನರಿಗೆ ಇರುವಂಥ ಅಪೇಕ್ಷೆ ಎಂದರೆ 50 ವರ್ಷದಲ್ಲಿ 45 ವರ್ಷದ ಇವರ ಆಡಳಿತದ ವ್ಯವಸ್ಥೆ ಒಂದು ಸಾರಿ ಕಿತ್ತು ಧೂಳೀಪಟ ಆಗಬೇಕು. ಆಗಿದೆ. ನಿವೇನಾದರೂ ಒಳ್ಳೆಯದು ಮಾಡಬಹುದು ಎಂದು ಜನರು ನೋಡುತ್ತಿದ್ದಾರೆ. ಜನರು ಏನಾದರೂ ತೀರ್ಮಾನ ತೆಗೆದುಕೊಳ್ಳಲಿ. ಅದಕ್ಕೆ ನಾವು ಬದ್ಧರಾಗಿದ್ದೇವೆ. ಬದುಕಿರುವವರೆಗೂ ಜನರ ತೀರ್ಪಿಗೆ ತಲೆಬಾಗುವಂಥ ಪಕ್ಷ ನಮ್ಮ ಪಾರ್ಟಿ. ಅದೊಂದು ಪಾಯಿಂಟ್ ಪ್ರೋಗ್ರಾಮ್. ಬಿಜೆಪಿ ಅಧಿಕಾರಕ್ಕೆ ಬರಬಾರದು. ನ್ಯಾಷನಲ್ ಅಜೆಂಡಾ ಏನು? ಬಿಜೆಪಿ ಅಧಿಕಾರಕ್ಕೆ ಬರಬಾರದು. ಇದರ ಪರಿಣಾಮ ನಿಮ್ಮ ಜೊತೆಗೆ ಇದ್ದಂಥ ಅನೇಕ ಜನ ಅನೇಕ ಬೇರೆ ಬೇರೆ ಪಕ್ಷದ ಮುಖಂಡರು ಇವತ್ತು ನಮ್ಮ ಜೊತೆಗೆ ಬರುತ್ತಿದ್ದಾರೆ ಎಂದು ನೀವೇ ಒಪ್ಪಿಕೊಂಡಿರಿ. ಒಬ್ಬ ಹರಿಜನ ಮಹಿಳೆಯನ್ನು ಮುಖ್ಯಮಂತ್ರಿಯನ್ನು ಮಾಡಿದಂಥ ಹೆಗ್ಗಳಿಕೆ ಕೂಡ ನಮಗೆ ಇರುವಂಥದ್ದು. ಚರ್ಚೆ ಬೇರೆ ಮಾಡೋಣ. ಎಪಿಎಂಸಿ ಗೆ ಅಷ್ಟೇ ಸೀಮಿತವಾಗಿ....

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಎರಡನೇ ಸಲ ಪುನಃ ಕೊಟ್ಟರು ಪುನಃ ಕೈ ಕೊಟ್ಟು ಬೇರೆ ಆಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮಗೆ ಕೃತಜ್ಞತೆ ಇಲ್ಲವಲ್ಲಾ. ಆಡಳಿತಪಕ್ಷ ಎಂದು ಅಲ್ಲಿ ಕುಳಿತುಕೊಳ್ಳುವುದಕ್ಕೆ ಬಿಜೆಪಿ ಕೊಡುಗೆ ಬಹಳ ದೊಡ್ಡದು ಇದೆ ಎನ್ನುವುದನ್ನು ನೀವು ಒಪ್ಪಿಕೊಳ್ಳುತ್ತೀರಿ ಮನಸ್ಸಿನಲ್ಲಾದರೂ ಎಂದು ಅಂದುಕೊಂಡಿದ್ದೇನೆ. ಮನಸಾಕ್ಷಿಯಾಗಿಯಾದರೂ ಒಪ್ಪಿಕೊಳ್ಳುತ್ತೀರಿ ಎಂದುಕೊಂಡಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ: 1983ಕ್ಕೆ ನಾವು ಹೋಗಬೇಕಾದರೆ ಹೋಗೋಣ. ಬಹುಶಃ ಅದನ್ನು ಚರ್ಚೆ ಮಾಡಲಿಕ್ಕೆ ಇನ್ನೊಂದುಕಾಲ ಬೇಕಾದರೆ ತೆಗೆದುಕೊಳ್ಳೋಣ. ಆದರೆ ಇಷ್ಟು ಮಾತ್ರ ನಿಜ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರು ಬೆಳಿಗ್ಗೆಯೇ ಬೇಜಾರು ಮಾಡಿಕೊಂಡಿದ್ದರು.

ಅಧ್ಯಕ್ಷರು: ಇಲ್ಲ. ಈ ರೀತಿಯೆಲ್ಲಾ ನೀವು ಮಾತನಾಡಿಕೊಂಡು ಎಲ್ಲಾ ನಿಮ್ಮ ನಿಜವಾದ ಸ್ವರೂಪ ನಮಗೆ ಗೊತ್ತಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮದು ಯಾವುದೇ ಕಾರಣಕ್ಕೆ ಕಾಂಗ್ರೆಸ್ ಈ ದೇಶದಲ್ಲಿ ಮತ್ತೆ ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳುವುದು. ಆದಷ್ಟು ಬೇಗ ನಾವು ಅಧಿಕಾರ ನಡೆಸುತ್ತೇವೆ. 50 ವರ್ಷದ ಈ ಕರ್ಮಕತೆಗೆ ಮಂಗಳ ಹಾಡಬೇಕು ಎನ್ನುವ ಅಪೇಕ್ಷೆಯಿದಲೇ ನಾವು ದೇಶಾದ್ಯಂತ ರಾಜಕಾರಣ ಮಾಡುತ್ತಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಂತೋಷ. ನೀವು ಬಿಎಸ್‌ಪಿ ಜೊತೆಗೆ ಲಗ್ನ ಮಾಡಿಕೊಳ್ಳಿ, ನಮ್ಮದೇನೂ ತಾಪತ್ರಯ ಇಲ್ಲ.

ಶ್ರೀ ಎಂ.ಸಿ.ನಾಣಯ್ಯ: ನೀವು ಅವರನ್ನು ದೂರ ಮಾಡಬೇಕು. ನಾವೇ ಇದ್ದುಕೊಳ್ಳಿ ಎನ್ನುತ್ತೀರಿ. ನಿಮ್ಮನ್ನು ಕಿತ್ತುಹಾಕಲಿಕ್ಕೆ ಇರುವುದಕ್ಕೆ ಬಹಳ ಸಮಯ ಬೇಕಾಗಿಲ್ಲ ಎನ್ನುತ್ತಿದ್ದೀರಿ. ಆದರೆ ಒಂದು ತಿಳಿದುಕೊಳ್ಳಿ. ನಿಮ್ಮದು ಯಾವುದು ಎಂದು ಹೇಳುವುದು ನಿಮ್ಮ ನಿಲುವೇ ಬೇರೆ. ನಿಮ್ಮ ರಾಜಕೀಯ ನೀತಿಯೇ ಬೇರೆ. ಈ ರಾಜಕೀಯ ನೀತಿಗೆ ನಾವು ಅವರು ಬಾಕಿ ಇರುವವರು ಒಟ್ಟಾರೆ ಸೇರಿ ನಿಮ್ಮ ನಿಲುವನ್ನು ಈ ರಾಷ್ಟ್ರದಲ್ಲಿ ಖಂಡಿತಾ ಬೆಳೆಯಲಿಕ್ಕೆ ಬಿಡಬಾರದು ಎನ್ನುವ ತೀರ್ಮಾನಕ್ಕೆ ನಾವೆಲ್ಲಾ ಸೇರಿ ಬಂದಿದ್ದೇವೆ. ಆ ಕೆಲಸ ಮಾಡುತ್ತೇವೆ.

(ಗೊಂದಲ).

ಶ್ರೀ ಎಂ.ಶ್ರೀನಿವಾಸ್: ಅದು ಆಗುವುದಿಲ್ಲ.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಶ್ರೀನಿವಾಸ್‌ರವರೇ, ತಾವು ಮಾತನಾಡಬೇಡಿ. ಯಡಿಯೂರಪ್ಪನವರು ಮಾತನಾಡಬಹುದು. ಏಕೆಂದರೆ ನೀವು ನಾವೆಲ್ಲಾ ಎಲ್ಲಿದ್ದೆವು ಎಂದು ನಮಗೆ ಗೊತ್ತಿದೆಯಲ್ಲಾ. ಯಡಿಯೂರಪ್ಪನವರಿಗೆ ಮಾತನಾಡುವುದಕ್ಕೆ ಅಧಿಕಾರ ಇದೆ. ಶ್ರೀನಿವಾಸರಿಗೆ ಇಲ್ಲ. ದಯವಿಟ್ಟು ಅಲ್ಲಿಂದ ಮಾತನಾಡಬೇಡಿ. ನೀವು ನಮ್ಮ ಜೊತೆಯಲ್ಲಿದ್ದಿರಿ. ಯಾವ ರೀತಿ ಇದ್ದಿರಿ ಎಂಬುದು ಎಲ್ಲಾ ಗೊತ್ತಿದೆ. ನೀವು ಬೇಡ ಬಿಡಿ. ಯಡಿಯೂರಪ್ಪ ನವರಿಗೆ ಅಧಿಕಾರ ಇದೆ.

ಶ್ರೀ ಎಂ.ಶ್ರೀನಿವಾಸ್: ಜನವರಿ ಒಳಗೆ ನಿಮ್ಮ ಜನತಾ ದಳ ಕ್ಲೋಸ್ ಆಗುತ್ತದೆ. ನೀವು 116ರಲ್ಲಿ ಕರೆಕ್ಟ್ ಆಗಿ 26 ಜನ ಗೆಲ್ಲುತ್ತೀರಿ. ಅದನ್ನು ಲೆಕ್ಕ ಮಾಡಿ ಇಟ್ಟಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ನಾಣಯ್ಯನವರೇ, ತಾವು ಹೇಳಿದ್ದು ಸರಿ ಇದೆ. ತಮ್ಮ ಮನಃ ಪರಿವರ್ತನೆಯಾಗಿದೆ ಎಂದು ನಾನು ತಿಳಿದುಕೊಂಡಿದ್ದೆ. ಇನ್ನೂ ಸಹ ನೀವು ಅವರೆಲ್ಲಾ ಸೇರಿ ನಮ್ಮನ್ನು ದೂರ ಇಡಬೇಕು ದೇಶದ ಜನರ ಮುಂದೆ ಎನ್ನುವುದು ಅದು ಸರಿ ಇದೆ. ನಮ್ಮ ಸೈದ್ಧಾಂತಿಕ ನಿಲುವೇನೆಂದರೆ ಈ ದೇಶ ಒಂದಾಗಿ

ಬಾಳಿ ಬದುಕಬೇಕು. ಈ ಜನರು ನೆಮ್ಮದಿಯಿಂದ ಜೀವನ ಮಾಡಬೇಕು. ಸ್ವಾತಂತ್ರ್ಯ ಗಳಿಸಿಕೊಟ್ಟ ಮಹಾನ್ ನಾಯಕರ ಕನಸು ನನಸಾಗಬೇಕು ಎನ್ನುವುದೇ ನಮ್ಮ ಸೈದ್ಧಾಂತಿಕ ವಿಚಾರ. ಅದು ಸರಿಯಲ್ಲ ಎಂದು ಹೇಳಿ ಒನ್ ಪಾಯಿಂಟ್ ಪ್ರೋಗ್ರಾಮ್ ಅಧಿಕಾರದಲ್ಲಿರಬೇಕು, ಅದು ಯಾರ ಜೊತೆಗೆ ಬೇಕಾದರೂ ಸಮಜಾಯಿಷಿ ಎಂದು ನಿಮ್ಮ ಪಾಲಿಸಿಯಾದರೆ ಬದಲಾವಣೆಯಾಗಿದ್ದೀರಿ ಎಂದು ನಾನು ತಿಳಿದುಕೊಂಡು ಮಾತನಾಡುತ್ತಿದ್ದೆ. ಒಂದಂತೂ ನಿಶ್ಚಿತ. ನಿಮ್ಮ ನಮ್ಮ ಕಾಂಗ್ರೆಸ್‌ನ ಸ್ನೇಹಿತರ ಮಾತನ್ನು ಈ ದೇಶದ ಜನ, ರಾಜ್ಯದ ಜನರು ನೋಡುತ್ತಿದ್ದಾರೆ. ಕೇಳುತ್ತಿದ್ದಾರೆ. ಯಾವುದು ಸರಿ, ಯಾವುದು ತಪ್ಪು ಎನ್ನುವುದನ್ನು ನಮ್ಮ ಮಾಲೀಕರು ತೀರ್ಮಾನ ಮಾಡುತ್ತಾರೆ. ಅದರ ಬಗ್ಗೆಯೇನೂ ವ್ಯತ್ಯಾಸವಿಲ್ಲವಲ್ಲಾ. ಆದರೆ ಇಷ್ಟಂತೂ ತಿಳಿದುಕೊಳ್ಳಿ. ನಿಮ್ಮಬ್ಬರ ಎಲ್ಲರ ಪ್ರಯತ್ನ ಅಕಸ್ಮಾತ್ ನೀವು ಅಧಿಕಾರದಲ್ಲಿ ಉಳಿದಿರುವುದಕ್ಕೆ ಒಂದೇ ಒಂದು ಕಾರಣ ನಮ್ಮ ಕಾಂಗ್ರೆಸ್‌ನ ಸ್ನೇಹಿತರು ನಿಮಗೆ ಬೆಂಬಲ ಕೊಟ್ಟರು, ಏತಕ್ಕೆ? ಚುನಾವಣೆಯಾಗಬಾರದು. ಲೋಕಸಭಾ ಚುನಾವಣೆಯಾದರೆ ಮಾರನೇ ಬೆಳಿಗ್ಗೆ ಭಾರತೀಯ ಜನತಾ ಪಾರ್ಟಿ ಅಲ್ಲಿ ಅಧಿಕಾರದಲ್ಲಿರುತ್ತದೆ. ಪ್ರಧಾನಿ ಅಟಲ್ ಬಿಹಾರ್ ವಾಜಪೇಯಿ ಇರುತ್ತಾರೆ ಎನ್ನುವ ಭಯತಾನೇ? ಇನ್ನೇನಾದರೂ ಇದೆಯೇ? ಇದೇ ತಾನೇ ನಿಮ್ಮ ಭಯ. ಅದಕ್ಕೋಸ್ಕರ ನಿಮ್ಮ ಒಗ್ಗಟ್ಟಿಗೂ ಬಿಜೆಪಿಯೇ ಕಾರಣ. ಇಷ್ಟೆಲ್ಲಾ ಆದ ಮೇಲೂ ಸಹಿತ ಇನ್ನೂ ನೀವು ಅಲ್ಲಿ ಅಧಿಕಾರದಲ್ಲಿದ್ದೀರಿ ಎಂದರೆ ಭೂತ ಯಾವುದು? ಭಯ ಯಾವುದು ಬಿಜೆಪಿ. ನೋಡೋಣ. ಕಾಲಬರಲಿ. ಆದರೆ ಇದಕ್ಕೆ ಸೀಮಿತವಾಗಿ ದಯಮಾಡಿ ನೀವು ನಾಮಿನೇಷನನ್ನು ಮುಂದುವರಿಸಲೇಬೇಕು ಎಂದು ಇದ್ದರೆ ವೋಟಿಂಗ್ ಅಧಿಕಾರವನ್ನು ತಾವು ಕೊಡಬೇಡಿ. ನಿಮ್ಮ ದೃಷ್ಟಿಯಿಂದಲೂ ಒಳ್ಳೆಯದು. ಏಕೆಂದರೆ ಏನಾದರೂ ಹೊಸ ಮಾರ್ಗ ಹಾಕೋಣ. 50 ವರ್ಷದ ಸ್ವರ್ಣ ಜಯಂತಿ ಆಚರಿಸುತ್ತಿರುವ ಕಾಲದಲ್ಲಿ ಪ್ರಜಾತಂತ್ರದ ವ್ಯವಸ್ಥೆ ಬಗ್ಗೆ ನಮಗೆ ವಿಶ್ವಾಸ ಇಟ್ಟುಕೊಳ್ಳುತ್ತೇವೆ. ಹಿಂಬಾಗಿಲಿನಿಂದ ಅಧಿಕಾರಕ್ಕೆ ಪ್ರಯತ್ನ ನಾವು ನೀವು ಯಾರೂ ಮಾಡುವುದು ಬೇಡ ಎನ್ನುವುದು ಏನಾದರೂ ನಿಮ್ಮ ನಿಲುವಿದ್ದರೆ ದಯಮಾಡಿ ಆ ವೋಟಿಂಗ್ ಪವರನ್ನು ವಾಪಸ್ ಪಡೆದು ಇಮಿಡಿಯೇಟ್ ಆಗಿ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆ ಮಾಡಬೇಕೆಂದು ಮಾತ್ರ ಈ ಸಂದರ್ಭದಲ್ಲಿ ನಾನು ಆಗ್ರಹ ಮಾಡುತ್ತೇನೆ.

+ ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ಏಕೀಕರಣ ಆದಮೇಲೆ 1966ರಲ್ಲಿ ಇಡೀ ಕರ್ನಾಟಕಕ್ಕೆ ಒಂದು ಕಾನೂನು ಜಾರಿಗೆ ಬಂತು. ಆ ಕಾನೂನಿನಲ್ಲಿ ನಾಮಿನೇಷನ್‌ಗೆ ಅವಕಾಶ ಇರಲಿಲ್ಲ. 1966ರಲ್ಲಿ ಯಾವಾಗ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದರೋ ಆಗ ಆದಂಥ ಕಾನೂನಿನಲ್ಲಿ ನಾಮಿನೇಷನ್‌ಗೆ ಅವಕಾಶ ಇರಲಿಲ್ಲ. ಮುಂದೆ 1980ರಲ್ಲಿ ಒಂದು ಬದಲಾವಣೆ ಬಂತು. ಆಗ ಇಬ್ಬರನ್ನು ನಾಮಿನೇಟ್ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟರು. ಆಮೇಲೆ 1985ರಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾದ ಮೇಲೆ ಅಜ್ಜೀಬಾಳ

ಹೆಗಡೆಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿ ಇದಕ್ಕೆ ಏನೇನು ಬದಲಾವಣೆ ತರಬೇಕೋ ಅದನ್ನು ಸೂಚಿಸಿರಿ ಎಂದು ಹೇಳಿದರು. ಆ ಸಮಿತಿಯ ನಿರ್ಣಯದ ಪ್ರಕಾರ ಈಗೇನು ಖರ್ಗೆ ಸಾಹೇಬರು ಓದಿದರು, ಆ ನಿರ್ಣಯದ ಪ್ರಕಾರ ನಾಮಿನೇಷನನ್ನು ತೆಗೆಯುವ ನಿರ್ಧಾರವನ್ನು 1991ರಲ್ಲಿ ನಮ್ಮ ಸರ್ಕಾರ ತೆಗೆದುಕೊಂಡಿತು. ಮುಂದೆ ದುರ್ದೈವ, ನಾವು ಚುನಾವಣೆ ಮಾಡಲಿಲ್ಲ. ಅದು ನಮ್ಮ ತಪ್ಪು. ಆದರೆ ನೀವು 1994ಕ್ಕೆ ಅಧಿಕಾರಕ್ಕೆ ಬಂದಮೇಲೆ ಇಲ್ಲಿಯವರೆಗೂ ನೀವು ಚುನಾವಯೆಯನ್ನು ಮಾಡಲಿಲ್ಲ. ನೀವೂ ಮಾಡಲಿಲ್ಲ. ನಿಮಗೆ ಹೈಕೋರ್ಟನಿಂದ ಡೆರೆಕ್ಷನ್ ಬಂದಮೇಲೆ. ಹೈಕೋರ್ಟಿನಲ್ಲಿ ನೀವು ಒಂದು ಮುಚ್ಚಳಿಕೆಯನ್ನು ಬರೆದುಕೊಟ್ಟು ಏಪ್ರಿಲ್ 30 ರೊಳಗಾಗಿ ಎಪಿಎಂಸಿ ಚುನಾವಣೆಯನ್ನು ನಾವು ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಮೇಲೆ ಚುನಾವಣೆಯನ್ನು ಅನಿವಾರ್ಯವಾಗಿ ನೀವು ಮಾಡಬೇಕಾಗುತ್ತದೆ. ಸ್ವಾಮಿ, ಚುನಾವಣೆಯೆಂದರೆ ಬರೀ ಸದಸ್ಯರ ಚುನಾವಣೆಯಲ್ಲ. ಚುನಾವಣೆ ಎಂದರೆ ಛೇರ್ಮನ್ ಮತ್ತು ಉಪಾಧ್ಯಕ್ಷರ ಚುನಾವಣೆಯು ಚುನಾವಣೆಯಲ್ಲೇ ನೀವು ಏಪ್ರಿಲ್ 30 ರೊಳಗೆ ಆ ಚುನಾವಣೆಯನ್ನು ಮುಗಿಸದೇ ಕೋರ್ಟ್ ಕಂಟೆಮ್ಟ್ ನೀವು ಮಾಡಿದಿರಿ, ಅದನ್ನು ಎಷ್ಟು ದುರ್ದೈವ ಎಂದರೆ ಚುನಾವಣೆಯಾದಮೇಲೆ ಚುನಾಯಿತ ಸದಸ್ಯರು ನಿಮ್ಮವರು ಬಹಳ ಮಂದಿ ಬರಲಿಲ್ಲ ಎಂದು ತಿಳಿದುಕೊಂಡಮೇಲೆ ನೀವು ಈ ನಾಮಿನೇಷನನ್ನು ಮತ್ತೇ ತಂದಿರಲ್ಲಾ, ಆ ನಾಮಿನೇಷನ್‌ಗೆ ವಿರೋಧ ಇದ್ದವರು ನಾಣಯ್ಯನವರು. ಈ ನಾಮಿನೇಷನ್ ನೀವು ಲಾ ಮಿನಿಸ್ಟರ್ ಇದ್ದಾಗ ಮತ್ತೆ ಬರುವ ಹಾಗೆ ಒಂದು ಆರ್ಡಿನೆನ್ಸ್ ಬಂತು. ಇರಲಿ. ಯಾವಾಗ ನೀವು ಈ ಅಧಿಕಾರದ ಸಲುವಾಗಿ ನಾಮಿನೇಷನ್ ತರುತ್ತೀರಿ, ಹಿಂದೆ 1987ರಲ್ಲಿ ಜಿಲ್ಲಾ ಪಂಚಾಯಿತಿ ಚುನಾವಣೆ ನಡೆದಾಗಲೂ ಸಹಿತ ಮಂಡಲ್ ಚುನಾವಣೆಯಾದಮೇಲೆ ಹೆಚ್ಚು ಮಂಡಲದಲ್ಲಿ ಅಧಿಕಾರವನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ನಾಮಿನೇಷನ್‌ಗೆ ಅವಕಾಶ ಕಲ್ಪಿಸಿದಿರಿ. ಆಗ ಹಿಂದುಳಿದವರ ಡೆಫನಿಷನ್ ಅನ್ನು ಮೂರುಬಾರಿ ಬದಲು ಮಾಡಿದಿರಿ. ಮೊದಲನೇ ಸಾರಿ ಬದಲು ಮಾಡಿದಿರಿ, ಆಗ ಅನುಕೂಲವಾಗಲಿಲ್ಲ. ಎರಡನೇ ಬಾರಿ ಬದಲು ಮಾಡಿದಿರಿ, ಅದೂ ಅನುಕೂಲವಾಗಲಿಲ್ಲ. ಮೂರನೇ ಬಾರಿ ಡೆಫನಿಷನ್ ಬದಲು ಮಾಡಿದಮೇಲೆ ಸ್ವಲ್ಪ ಹೆಚ್ಚಿಗೆ ಮಂಡಲಗಳು ನಿಮ್ಮ ಕೈಯಲ್ಲಿ ಬರುತ್ತವೆ ಎಂದು ತಿಳಿದುಕೊಂಡು ನೀವು ಮಾಡಿದಿರಿ. ಏನು ಉದ್ದೇಶ ಇತ್ತು, ನಿಮ್ಮದು ಹೆಚ್ಚು ಮಂಡಲದಲ್ಲಿ ಹೆಚ್ಚು ಗ್ರಾಸ್ ರೂಟ್ ಲೆವೆಲ್ ಇನ್‌ಸ್ಟಿಟ್ಯೂಷನ್‌ನಲ್ಲಿ ನಿಮ್ಮವರೆ ಅಧಿಕಾರದಲ್ಲಿದ್ದರೆ ಬಹುತೇಕ ಅಧಿಕಾರ ಖಾಯಂ ಸಿಗುತ್ತದೆ ಎಂದುಹೇಳಿ ನೀವು ಕನಸು ಕಂಡಿದ್ದಿರಿ ಏನಾಯಿತು 1989ರಲ್ಲಿ? ಎಷ್ಟು ಜನ ನೀವು ಹೆಚ್ಚು ಅಧಿಕಾರಕ್ಕೆ ಗ್ರಾಸ್ ರೂಟ್ ಲೆವೆಲ್‌ನಲ್ಲಿ ಹೋಗುತ್ತಾರೆ ಅಷ್ಟು ನಿಮಗೆ ಅನ್ಯಾಯವಾಗುತ್ತದೆ. ಅಲ್ಲಿ ಅವರೆಷ್ಟು ಅನ್ಯಾಯ ಮಾಡುತ್ತಾರೆ ಎನ್ನುವುದು ನಿಮಗೆ ಗೊತ್ತಾಗುವುದಿಲ್ಲ ಇಲ್ಲಿ ಬೆಂಗಳೂರಿನಲ್ಲಿದ್ದವರಿಗೆ. ಅದಕ್ಕೆ ದಯವಿಟ್ಟು ನಾಮಿನೇಷನ್ ಮಾಡಿ ಕಾನೂನಿನ ಒಂದು ಸ್ಪಿರಿಟ್ ಏನಿತ್ತು, ಅದರ

ವಿರುದ್ಧ ನಾಮಿನೇಷನ್ ಮಾಡಿ- ಅಧಿಕಾರ ಹಿಡಿಯುವ ಗೋಜಿಗೆ ಹೋಗಬೇಡಿ. ಹಿಂದೆ ನಡೆದಂಥ ಇತಿಹಾಸವನ್ನು ನೆನಪಿನಲ್ಲಿಟ್ಟುಕೊಂಡು ಮುಂದೆ ನೀವು ಅಧಿಕಾರಕ್ಕೆ ಬರಬೇಕು ಎನ್ನುವ ಇಚ್ಛೆ ಇದ್ದರೆ ಈ ಆರ್ಡಿನೆನ್ಸ್ ಏನು ಇದೆಯಲ್ಲಾ, ಇದನ್ನು ಬಿಲ್ ಮಾಡಿಸಲಿಕ್ಕೆ ಹೋಗಬೇಡಿ. ಇದನ್ನು ವಿತ್‌ಡ್ರಾ ಮಾಡಿಕೊಂಡುಬಿಡಿ. ಹೈಕೋರ್ಟಿನಲ್ಲಿ ಕೇಸ್ ಹೋಗುತ್ತದೆ, ಇದೂ ಹೋಗುತ್ತದೆ. ಕೂಡಲೇ ಅಧ್ಯಕ್ಷರು, ಉಪಾಧ್ಯಕ್ಷರಿಗೆ ಅವಕಾಶವನ್ನು ಕಲ್ಪಿಸಿಕೊಡಿ. ಇವತ್ತು ಚುನಾಯಿತ ಸದಸ್ಯರು ಮೇ ತಿಂಗಳಿಂದ ಇವತ್ತು ಆಗಸ್ಟ್, ಮೂರು ತಿಂಗಳು ಅವರ ಹಕ್ಕನ್ನು ನೀವು ಮೊಟಕುಗೊಳಿಸಿದ್ದೀರಿ. ಯಾವುದೇ ಒಬ್ಬ ಚುನಾಯಿತ ಸದಸ್ಯ ಇವತ್ತು ಹೈಕೋರ್ಟಿಗೆ ಹೋದ ಎಂದರೆ ನಿಮ್ಮ ಮೇಲೆ ಕಂಟೆಮ್ಪ್ಟ್ ಕೇಸ್ ಆಗುತ್ತದೆ. ಅದು ತಮಗೆ ಗೊತ್ತಿರಬೇಕು ಲಾ ಮಿನಿಸ್ಟರ್ ಆಗಿ. ನೀವು ಏಪ್ರಿಲ್ 30ರೊಳಗೆ ಮುಗಿಸತ್ತೇವೆ ಎಂದುಹೇಳಿದ್ದಿರಿ. ಕಂಟೆಮ್ಪ್ಟ್ ಕೇಸ್ ಆಗುತ್ತದೆ. ಅದಕ್ಕೆ ದಯವಿಟ್ಟು ಅವು, ಯಾವುದಕ್ಕೂ ಅವಕಾಶ ಕೊಡದೆ ಈಗೇನು ವೋಟಿಂಗ್ ಕೊಡುವ ಅಧಿಕಾರ ಕೊಡಬೇಕು ಎಂದು ಮಾಡಿದಿರಿ, ಕಡೆಗೆ ವೋಟಿಂಗ್ ಅಧಿಕಾರವನ್ನಾದರೂ ತೆಗೆಯಿರಿ. ಇಬ್ಬರು ಎಸ್‌ಸಿ/ಎಸ್‌ಟಿಯವರು ಇರುತ್ತಾರೆ. ಒಬ್ಬರು ಮಹಿಳೆಯರು ಇರುತ್ತಾರೆ. ಮತ್ತೆ ಹಿಂದುಳಿದವರೆಲ್ಲರೂ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಿದ್ದಾರೆ. ಈ ರೀತಿ ಇದ್ದಾಗ ನೀವು ಯಾರಿಗೆ ಅಧಿಕಾರವನ್ನು ಕೊಡುವುದು? ಅಧಿಕಾರ ಹಿಡಿಯುವುದಕ್ಕೆ ನೀವು ಸೋಷಿಯಲ್ ಜಸ್ಟೀಸ್ ಫಿಲಾಸಫಿ ಹೇಳುತ್ತೀರಿ. ದಯವಿಟ್ಟು ಅವರಿಗೆ ನಾಮಿನೇಷನ್ ಮಾಡಬೇಕು, ಅವರಿಗೆ ಸಭೆಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಡಬೇಕು ಎನ್ನುವುದಿದ್ದರೆ ಆಫೀಸ್ ಬೇರರ್ಸ್ ಎಲೆಕ್ಷನ್‌ನಲ್ಲಿ ಅಧಿಕಾರ ಇಲ್ಲದಂತೆ ತಾವು ಮಾಡಿದಿರಿ ಎಂದರೆ ನಿಮ್ಮ ಆದರ್ಶವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಏನಾದರೂ ಮಾಡಿ ಚುನಾಯಿತ ಪ್ರತಿನಿಧಿಗಳು ತಮ್ಮ ಹಕ್ಕನ್ನು ಚಲಾಯಿಸುವ ಹಾಗೆ, ರೈತರ ಹಿತರಕ್ಷಣೆಯನ್ನು ಮಾರುಕಟ್ಟೆಯಲ್ಲಿ ಮಾಡುವ ಹಾಗೆ ಮತ್ತು ರೈತರಿಗೆ ಈಗ ಆಗುತ್ತಿರುವ ಶೋಷಣೆಯನ್ನು ಕಡಿಮೆ ಮಾಡುವ ಹಾಗೆ ಒಂದು ವಾತಾವರಣವನ್ನು ನಿರ್ಮಿಸಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:(ಪಾಂಡವಪುರ): ಸನ್ಮಾನ್ಯ ಸಭಾಧ್ಯಕ್ಷರೆ, ಸಹಕಾರ ಕ್ಷೇತ್ರದಲ್ಲಿ ನಾಮಕರಣ ಪದ್ಧತಿ ವಿಚಾರದಲ್ಲಿ ಮಾತನಾಡಬೇಕೆಂದರೆ ನಾನು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ನಿರ್ದೇಶಕನಾಗಿದ್ದಾಗ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿತ್ತು. ಆಗ ನಾವು 6 ಜನರು ಗೆದ್ದಿದ್ದೆವು. ಕಾಂಗ್ರೆಸ್ ಪಕ್ಷದವರು ಮೂರು ಜನರಿದ್ದರು. ದಳದವರು ಇಬ್ಬರಿದ್ದರು. ಇವರು 5 ನಾಮಕರಣ ಮಾಡಿದರು. 5 ಮತ್ತು 3 ಸೇರಿ ಒಟ್ಟು 8 ಆಯಿತು. ಅಫಿಷಿಯಲ್ 3 ಜನ ಸೇರಿ ಒಟ್ಟು 11 ಜನ ಮತ್ತೆ ಅವರು ಅಧಿಕಾರಕ್ಕೆ ಬಂದರು. ಮತ್ತೆ ಅವರು ಹೋದ ಮೇಲೆ ಇವರು ಬಂದರು. ಇವರು ಇಬ್ಬರಿದ್ದರು ಮತ್ತೆ ಇವರು 5 ನಾಮಕರಣ ಮಾಡಿದರು ಮತ್ತೆ ಅವರಿಗೆ 3 ಓಟ್

ಸಿಕ್ಕಿತು ಅವರು ಅಧಿಕಾರಕ್ಕೆ ಬಂದರು.

ಮಾನ್ಯ ಸದಸ್ಯರು: ಇವರು ಅವರು ಎಂದರೆ ಯಾರು?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕಾಂಗ್ರೆಸ್ ಪಕ್ಷ, ಜನತಾದಳ. ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ಕಾನೂನು ಇರಲಿ ಇಲ್ಲದೆ ಇರಲಿ ನಾಮಕರಣ ಪದ್ಧತಿ ತಪ್ಪು; ನಮ್ಮ ಊರಿನಲ್ಲ ಒಬ್ಬ ಗೌಡ ಇದ್ದ. ಅವನಿಗೆ ಇಬ್ಬರು ಹೆಂಡತಿಯರು. ಒಬ್ಬಳಿಗೆ ಬಿಳಿ ಕೂದಲು ಮತ್ತೊಬ್ಬಳಿಗೆ ಕಪ್ಪು ಕೂದಲು. ಹಳ್ಳಿಯಲ್ಲಿ ಸಾಮಾನ್ಯವಾಗಿ ಹೇನು ನೋಡುವ ಪದ್ಧತಿ. ಒಬ್ಬಳು ಮತ್ತೊಬ್ಬಳನ್ನು ಕುಳ್ಳಿರಿಸಿಕೊಂಡು ಹೇನು ನೋಡುತ್ತಿದ್ದಳು. ಕರಿ ಕೂದಲು ಇದ್ದವಳಿಗೆ ಬಿಳಿ ಕೂದಲೆಂದರೆ ಆಗುತ್ತಿರಲಿಲ್ಲ, ಬಿಳಿ ಕೂದಲಿನವಳಿಗೆ ಕರಿ ಕೂದಲೆಂದರೆ ಆಗುತ್ತಿರಲಿಲ್ಲ. ಹೀಗಾಗಿ ಇಬ್ಬರೂ ಕೂದಲನ್ನೆ ಎಳೆದುಹಾಕಿಬಿಟ್ಟರಂತೆ. ಆ ರೀತಿ ಪೂರ್ಣವಾಗಿ ಸಹಕಾರಿ ಕ್ಷೇತ್ರವಾಗಿದೆ. ನಾಮಕರಣ ಮಾಡಿ ಮಾಡಿ ಪೂರ್ತಿ ತಲೆ ಬೋಳು ಮಾಡಿದರು. ಇಲ್ಲದಿದ್ದರೆ ತಮಿಳುನಾಡು ಮಾದರಿಯಲ್ಲಿ ಮಾಡಿ ಅಥವಾ ಪೂರ್ತಿ ನಾಮಕರಣ ಮಾಡುವಂಥ ಕೆಲಸವನ್ನು ಮಾಡಿ. ಯಾವ ಪ್ರಜಾಪ್ರಭುತ್ವ ಪದ್ಧತಿ ಏನಿದೆ....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇವರು ಯಾವ ನಾಮಕರಣದ ಬಗ್ಗೆ ಹೇಳುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಮೇಲುಕೋಟೆ ನಾಮವೇ ಅಥವಾ ತಿರುಪತಿ ನಾಮವೇ? ಏಕೆಂದರೆ ಮೇಲುಕೋಟೆ ನಾಮದ ಕೇಸ್ ಸುಪ್ರೀಂ ಕೋರ್ಟ್‌ನಲ್ಲಿದೆ, ತಿರುಪತಿ ನಾಮದ ಕೇಸ್ ಹೈಕೋರ್ಟ್‌ನಲ್ಲಿದೆ.

ಅಧ್ಯಕ್ಷರು: ನಿಮಗೆ ಮಕ್ಕಳು ಮರಿಯೇ ಇಲ್ಲ. ನಿಮಗೇತಕ್ಕೆ ನಾಮಕರಣದ ಚಿಂತೆ? ಮಕ್ಕಳು ಮರಿ ಇರುವವರಿಗೆ ನಾಮಕರಣದ ಬಗ್ಗೆ ಆಲೋಚನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಆ ನಾಮಕರಣದ ಸುದ್ದಿ ಗೋತ್ತಿದ್ದರೆ ಪರವಾಗಿಲ್ಲ. ಮಕ್ಕಳು ಮರಿ ಆಗಿರುವವರಿಗೆ ಗೊತ್ತು ನಾಮಕರಣ ಅಂದರೆ ಏನು ಎಂದು.

ಅಧ್ಯಕ್ಷರು: ನಾಮಕರಣ ಮಾಡುವುದಕ್ಕೆ ನಾವು ಪಟ್ಟಿರುವ ಕಷ್ಟ ನಮಗೆ ಗೊತ್ತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದಕ್ಕೆ ಆ ಕಷ್ಟವನ್ನು ಸ್ವಲ್ಪ ಹೇಳಿ ಎಂದು ಹೇಳಿದೆ. ಮೇಲುಕೋಟೆ ನಾಮದ್ದು ಕಷ್ಟವೊ ಅಥವಾ ತಿರುಪತಿ ನಾಮದ್ದು ಕಷ್ಟವೋ ಎಂದು.

ಅಧ್ಯಕ್ಷರು: ಹಾಗೆಲ್ಲ ಸುಮ್ಮನೆ ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಬಹಳ ಕೆಲಸ ಇದೆ.

ಶ್ರೀ ಕುಂಬ್ಳೆ ಸುಂದರರಾವ್: ಎಲ್ಲರಿಗೂ ಮಕ್ಕಳ ನಾಮಕರಣದ ಬಗ್ಗೆ ಆಸ್ತೆ ಇರುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಆದ್ದರಿಂದ ತಾವು ಇನ್ನೊಂದು ಕಾಯಿದೆ ತರುತ್ತೀರಿ ಎಂದು ನಾವು ಬಹಳ ದಿವಸಗಳಿಂದ ಕಾದಿದ್ದೇವೆ. ಅದರಲ್ಲೂ ನಾನಂತೂ ಬಹಳ ಕಾದಿದ್ದೇನೆ. ಸೌಹಾರ್ದಯುತ ಸಹಕಾರಿ ಕಾಯಿದೆ ಬಗ್ಗೆ ಮಾನ್ಯ ಪಾಟೀಲರು ಏನು ಹೇಳಿದರು ಅದಕ್ಕೆ ತಾವು ಹೋದ ಸಲವೇ ತರಬೇಕೆಂದಿದ್ದೆ, ಆದರೆ ಇನ್ನೇನು ತರಬೇಕು ಎನ್ನುವುದರೊಳಗೆ ಸದನ ಮುಗಿದೆ ಹೋಯಿತು ಎಂದು ಹೇಳಿದಿರಿ. ಈ ಹಾವಾಡಿಗರು ಏನು ಮಾಡುತ್ತಾರೆ ಎಂದರೆ ಹಾವಾಡಿಸುವಾಗ ಉಫ್ ಎಂದು ಉರುಬಿ ಇದು ಆಫ್ರಿಕಾದಿಂದ ಬಂದಿದೆ. ಇದನ್ನು ಹೊರಗಡೆ ಬಿಟ್ಟರೆ ಜನರೆಲ್ಲಾ ಭಯ ಪಡುತ್ತೀರಿ. ಅದಕ್ಕೆ ಇದನ್ನು ಕೊನೆಯಲ್ಲಿ ನಿಮಗೆ ತೋರಿಸುತ್ತೇನೆ ಎಂದು ಬುಟ್ಟಿನಲ್ಲಿ ಇಟ್ಟುಕೊಂಡು ಎಲ್ಲರ ಬಳಿ ದುಡ್ಡು ತೆಗೆದುಕೊಂಡು ತಾಯತ ಇಂಥವುಗಳನ್ನೆಲ್ಲಾ ತೆಗೆದುಕೊಂಡು ಮನೆಕಡೆ ಹೋಗುತ್ತಾನೆ. ಈ ರೀತಿ ನೀವು ಬುಟ್ಟಿಯಲ್ಲಿಟ್ಟುಕೊಂಡು ಇನ್ನೇನು ಬರುತ್ತದೆ ಎಂದು ಕಾದುಕೊಂಡು ಕುಳಿತಿದ್ದೀರಿ. ಮೊನ್ನೆ ಅವರು ಸಿಕ್ಕಿದಾಗ ಕೇಳಿದೆ ಏನು ಸ್ವಾಮಿ, ಸಹಕಾರ ಸೌಹಾರ್ದಯುತ ಕಾಯಿದೆ ತಂದು ಸಹಕಾರಿ ಕ್ಷೇತ್ರದಲ್ಲಿ ಮಹಾ ದೊಡ್ಡ ಕ್ರಾಂತಿ ಮಾಡುತ್ತೇವೆ ಎಂದಿರಿ ಏತಕ್ಕ ಅದನ್ನು ತರಲಿಲ್ಲ ಎಂದರೆ ಅವರು ಹೇಳಿದರು, ತರಬೇಕು ಎಂದು ಇದ್ದೆ ಅಷ್ಟರಲ್ಲಿ ನಮ್ಮಲ್ಲೇ ಒಳಜಗಳ ಪ್ರಾರಂಭವಾಯಿತು ಅದಕ್ಕೆ ತರಲಾಗಲಿಲ್ಲ ಎಂದರು. ಏನು ಜಗಳ ಎಂದರೆ ಅದೇ ನಾಮಕರಣ ಎಂದರು. ನಾಮಕರಣ ರದ್ದು ಮಾಡಬೇಕು ಎಂಬ ನಿಯಮವನ್ನು ರೂಪಿಸಿದ್ದೀರಿ. ಆ ನಾಮಕರಣ ರದ್ದತಿಗೆ ಆಂತರಿಕವಾಗಿ ವಿರೋಧ ಇರುವುದರಿಂದ ನಾನು ಸಹಕಾರ ಸೌಹಾರ್ದಯುತ ಕಾಯಿದೆಯನ್ನು ಆ ಬುಟ್ಟಿಯಲ್ಲಿ ಹಾಗೆ ಇಟ್ಟಿದ್ದೇನೆ. ಅದರಲ್ಲಿ ಹಾವೂ ಇಲ್ಲ ಏನೂ ಇಲ್ಲ. ಅದು ಹಾಗೆಯೇ ಉಳಿದುಕೊಂಡಿದೆ ಎಂದರು. ಆದುದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ನಿಜವಾಗಿ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಎಪಿಎಂಸಿ ಆಗಬಹುದು ಅಥವಾ ಯಾವುದೇ ಸಹಕಾರಿ ಸಂಘ ಸಂಸ್ಥೆಯಾಗಿರಬಹುದು. ಕಾನೂನಿಲ್ಲಿ ಅವಕಾಶ ಇರಬಹುದು. ಅಥವಾ ಇಲ್ಲದೇ ಇರಬಹುದು. ಆದರೆ ಅನಾವಶ್ಯಕವಾಗಿ ಇಡೀ ಕ್ಷೇತ್ರವನ್ನು ಹಾಳು ಮಾಡುವಂಥ ಈ ನಾಮಕರಣ ಪದ್ಧತಿಯನ್ನು ದಯವಿಟ್ಟು ಕೈಬಿಟ್ಟು ಪ್ರಜಾಪ್ರಭುತ್ವದಲ್ಲಿ ಗೌರವ ಕೊಡತಕ್ಕಂಥ ಕೆಲಸವನ್ನು ತಾವು ಬೆಳೆಸಿಕೊಳ್ಳಬೇಕೆಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ,

ಕರ್ನಾಟಕ ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಈಗಾಗಲೇ ಚುನಾವಣೆ ನಡೆದಿದ್ದು ಇವುಗಳ ಆಡಳಿತ ಮಂಡಳಿಗಳಿಗೆ ಅಧ್ಯಕ್ಷರುಗಳನ್ನು ಚುನಾಯಿಸಲು ನಾಮ ನಿರ್ದೇಶನ ಸದಸ್ಯರಿಗೆ ಮತದಾನದ ಹಕ್ಕನ್ನು ನೀಡಿರುವುದರಿಂದ ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧಭಾಸ ಉಂಟಾಗಿರುವ ವಿಷಯವನ್ನು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 60ನೇ

ನಿಯಮದ ಮೇರೆಗೆ ಅಧಿವೇಶನದಲ್ಲಿ ಪ್ರಸ್ತಾಪಿಸಲು ಮಾನ್ಯ ವಿರೋದ ಪಕ್ಷದ ನಾಯಕರು ಹಾಗೂ ಇತರ ಮಾನ್ಯ ಸದಸ್ಯರುಗಳು ನಿಲುವಳಿ ಸೂಚನೆಯನ್ನು ನೀಡಿರುವರು

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 29 ಮತ್ತು 53 (ಎ)ಗಳಲ್ಲಿ ರಾಜ್ಯ ಸರ್ಕಾರದಿಂದ ಸಹಕಾರಿ ಸಂಘಗಳ ಸಮಿತಿಗಳಿಗೆ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡುವ ಬಗ್ಗೆ ತಿಳಿಸಲಾಗಿದೆ. ರಾಜ್ಯ ಸರ್ಕಾರ ಈ ಕೆಳಕಂಡಂತೆ ಸರ್ಕಾರದಿಂದ ಸದಾ ಪಡೆದಿರುವ ಸಹಕಾರ ಸಂಘಗಳಿಗೆ ನಾಮ ನಿರ್ದೇಶನ ಮಾಡಬಹುದಾಗಿದೆ.

ಅ) ಸಂಘದ ಷೇರು ಬಂಡವಾಳಕ್ಕೆ ಅಥವಾ

ಆ) ಸಂಘದ ಷೇರು ಬಂಡವಾಳವನ್ನು ಒದಗಿಸಲು ಪರೋಕ್ಷವಾಗಿ ಸಹಾಯ ಅಥವಾ

ಇ) ಅಸಲನ್ನು ಮತ್ತು ಸಾಲದ ಮೇಲಿನ ಬಡ್ಡಿ ಮತ್ತು ಮುಂಗಡಗಳನ್ನು ಪಾವತಿಸಲು ಖಾತರಿ.

1991 ರಲ್ಲಿ ತಿದ್ದುಪಡಿ ಮಾಡುವ ಮುನ್ನ, ಇದೇ ರೀತಿಯ ಅವಕಾಶವನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆ, 1996ರಲ್ಲಿ ಕಲ್ಪಿಸಲಾಗಿತ್ತು. ತಿದ್ದುಪಡಿಯಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸರ್ಕಾರ ಇಬ್ಬರನ್ನು ನಾಮ ನಿರ್ದೇಶನ ಮಾಡಬಹುದಾಗಿದ್ದು ಅದರಲ್ಲಿ ಒಬ್ಬರು ಪರಿಶಿಷ್ಠ ಜಾತಿ ಅಥವಾ ಪರಿಶಿಷ್ಠ ಪಂಗಡಕ್ಕೆ ಸೇರಿದವರಾಗಿರಬೇಕು ಮತ್ತು ಸರ್ಕಾರದ ಇಚ್ಛೆಯಂತೆ ಸದಸ್ಯರಾಗಿ ಅಧಿಕಾರ ಹೊಂದಿರುತ್ತಾರೆ. ಆದರೆ, ಈ ಅವಕಾಶವನ್ನು 1991ರಲ್ಲಿ, ಕರ್ನಾಟಕ ಕಾಯ್ದೆ 16ರ ಮೂಲಕ ಮತ್ತೊಂದು ತಿದ್ದುಪಡಿ ತಂದು ರದ್ದುಪಡಿಸಲಾಯಿತು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸರ್ಕಾರವು ಯಾವುದೇ ನಾಮ ನಿರ್ದೇಶನಗಳನ್ನು ಮಾಡಲು ಕಾಯ್ದೆ ಅವಕಾಶವಿಲ್ಲದ ಕಾರಣ ನಾಮನಿರ್ದೇಶನ ಮಾಡಲು ಸರ್ಕಾರವು ತೀರ್ಮಾನಿಸಿತು.

102 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಏಪ್ರಿಲ್ 1997ರಲ್ಲಿ ಹಾಗೂ ಬಳ್ಳಾರಿ ಕೃಷಿ ಉತ್ಪನ್ನನ ಮಾರುಕಟ್ಟೆ ಸಮಿತಿಗೆ 25-7-97ರಂದು ಚುನಾವಣೆ ನಡೆಸಲಾಗಿದೆ. ನಂತರ ಅಧ್ಯಕ್ಷರು: ಉಪಾಧ್ಯಕ್ಷರ ಚುನಾವಣೆ ಮುಂದಿನ ಆದೇಶದವರೆಗೆ ನಡೆಸದಂತೆ ಸರ್ಕಾರವು ತಡೆಯಾಜ್ಞೆ ನೀಡಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ 1966ರಡಿಯಲ್ಲಿ ಸ್ಥಾಪಿತವಾಗಿದ್ದು ಸ್ಥಳೀಯ

ಸಂಸ್ಥೆಗಳಾಗಿರುತ್ತದೆ. (ಲೋಕಲ್ ಅಥಾರಿಟಿ). ಮಾರುಕಟ್ಟೆ ಶುಲ್ಕ, ಲೈಸೆನ್ಸ್ ಶುಲ್ಕ, ಇತರೆ ಶುಲ್ಕ ದಂಡ ರೂಪದಲ್ಲಿ ಬರುವ ಹಣ, ಸಮಿತಿ ಮಾಡುವ ಸಾಲ, ಸರ್ಕಾರದಿಂದ ಬರುವ ಧನಸಹಾಯ, ಸಾಲವಂತಿಗೆ ಇತ್ಯಾದಿ ಮೊತ್ತವು ಕಾಯಿದೆಯ ಪ್ರಕರಣ 90ರಡಿಯಲ್ಲಿ ನಿಗದಿಪಡಿಸಿದ ಮಾರುಕಟ್ಟೆ ನಿಧಿಯ ಭಾಗವಾಗಿರುತ್ತದೆ. ಕಾಯಿದೆ ಪ್ರಕರಣ 93ರಲ್ಲಿ ಈ ಮಾರುಕಟ್ಟೆ ನಿಧಿಯನ್ನು ಯಾವ ಉದ್ದೇಶಗಳಿಗೆ ಬಳಸಬೇಕೆನ್ನುವ ಬಗ್ಗೆ ಸ್ಪಷ್ಟ ನಿರೂಪಣೆ ಇದೆ. ಇದರಲ್ಲಿ ಮಾರುಕಟ್ಟೆ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸಮಿತಿಯ ಸದಸ್ಯರುಗಳಿಗೆ ಗೌರವಧನ, ಪ್ರವಾಸಭತ್ಯೆ, ಹಾಗೂ ಇತರೆ ಭತ್ಯಗಳ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. ಈ ಹಣವು ಸ್ಥಳೀಯ ಸಂಸ್ಥೆಗಳು ನಿರ್ವಹಿಸುವ ಸಾರ್ವಜನಿಕ ನಿಧಿಯಾಗಿರುವುದರಿಂದ (ಲೋಕಲ್ ಫಂಡ್) ಇದರ ನಿರ್ವಹಣೆಯಲ್ಲಿ ಸರ್ಕಾರದ ಪಾತ್ರದ ಬಗ್ಗೆ ಮತ್ತು ನೀತಿ ನಿಯಮಗಳ ನಿರೂಪಣೆ ಕುರಿತು ನಿರ್ಣಯಗಳನ್ನು ಕೈಗೊಳ್ಳಲು ಸಹಾಯಕವಾಗಲು ಹಾಗೂ ಹಿಂದುಳಿದ ವರ್ಗ ಅಲ್ಪಸಂಖ್ಯಾತರು ಇನ್ನಿತರ ವರ್ಗಗಳಿಗೆ ಪ್ರಾತಿನಿಧ್ಯ ನೀಡಲು ಸರ್ಕಾರದ ವತಿಯಿಂದ 3 ಜನ ಸದಸ್ಯರನ್ನು ಮಾರುಕಟ್ಟೆ ಸಮಿತಿಗಳಲ್ಲಿ ನಾಮ ನಿರ್ದೇಶನ ಮಾಡಲು ಕರ್ನಾಟಕ ಅಧ್ಯಾದೇಶ ಸಂಖ್ಯೆ: 3:97-ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ತಿದ್ದುಪಡಿ (ಅಧ್ಯಾದೇಶ, 1997ರ ಮೂಲಕ ಪ್ರಕರಣ 11 (1) (ix) ಕ್ಕೆ ತಿದ್ದುಪಡಿ ಮಾಡಲಾಗಿದೆ. (ಸರ್ಕಾರದ ಅಧಿಸೂಚನೆ ಸಂಖ್ಯೆ ಎಎಲ್ 19 ಹಾಸನ 97 ದಿನಾಂಕ: 21-5-97 ಕರ್ನಾಟಕ ರಾಜ್ಯ ಪತ್ರ ವಿಶೇಷ ಪತ್ರಿಕೆ ದಿನಾಂಕ: 22-5-97).

ಮೇಲ್ಕಂಡ ಅಧ್ಯಾದೇಶದ ಕ್ರಮಬದ್ಧತೆಯನ್ನು ರಿಟ್ ಅರ್ಜಿ ಸಂಖ್ಯೆ: 15380:97 ರಲ್ಲಿ ಪ್ರಶ್ನಿಸಲಾಗಿತ್ತು. 19-5-97ರಲ್ಲಿ ಉಚ್ಚನ್ಯಾಯಲಯ ಈ ಅಧ್ಯಾದೇಶವನ್ನು ಜಾರಿಗೊಳಿಸದಂತೆ ತಡೆಯಾಜ್ಞೆ ನೀಡಿತ್ತು. ನಂತರ ಸರ್ಕಾರವು ರಿಟ್ ಅಪೀಲ್ ಸಂಖ್ಯೆ: 3440-97ರಲ್ಲಿ (ರಾಜ್ಯ ವಿರುದ್ಧ ಬಿ.ಎ.ಹಸನಬ ಇತರರು) ಅಪೀಲು ಹೋಗಿದ್ದು, ವಿಭಾಗೀಯ ಪೀಠವು 25-5-97ರಂದು ಮೇಲ್ಕಂಡ ತಡೆಯಾಜ್ಞೆ ತೆರವು ಮಾಡಿ ಸದಸ್ಯರನ್ನು ನಾಮನಿರ್ದೇಶನ ಮಾಡಲು ಅವಕಾಶ ನೀಡಿ ರಿಟ್ ಅರ್ಜಿ ಇತ್ಯರ್ಥವಾಗುವವರೆಗೆ ಅಧ್ಯಕ್ಷರ: ಉಪಾಧ್ಯಕ್ಷರ ಚುನಾವಣೆ ನಡೆಸದಂತೆ ಆದೇಶ ನೀಡಿದೆ. ನಂತರ ವಿಭಾಗೀಯ ಪೀಠವು 14-7-97ರಂದು ಮೇಲ್ಕಂಡ ಆದೇಶವನ್ನು ರಿಟ್ ಅರ್ಜಿ ಇತ್ಯರ್ಥವಾಗುವವರೆಗೆ ಮುಂದುವರೆಸಿ ಆದೇಶ ದೊರಕಿಸಿದೆ.

ಉಚ್ಚನ್ಯಾಯಲಯದಲ್ಲಿರುವ ರಿಟ್ ಅರ್ಜಿ ಸಂಖ್ಯೆ: 15380:97ರ ಬಗ್ಗೆ ಬರುವ ತೀರ್ಪಿನ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು. ಇದುವರೆಗೂ ಕೂಡ ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇರುವುದರಿಂದ ಹೈಕೋರ್ಟ್ ಏನು ತೀರ್ಮಾನ ಮಾಡುತ್ತದೆಯೊ ಅದರಂತೆ ನಾವು ಮುಂದಿನ ಕಾರ್ಯಕ್ರಮವನ್ನು ನಡೆಸುತ್ತೇವೆ ಎಂದು ಹೇಳಲು ಇಷ್ಟಪಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ನಾಮಿನೇಷನ್ ಪದ್ಧತಿಯನ್ನು ವಾಪಸ್ ತೆಗೆದುಕೊಳ್ಳುತ್ತೀರೋ ಅಥವಾ ಇಲ್ಲವೋ?

ಶ್ರೀ ಹೆಚ್.ನಾಗಪ್ಪ: ಹೈಕೋರ್ಟ್‌ಭಲ್ಲಿ ನಾಮಿನೇಷನ್ ಬಗ್ಗೆ ಕೇಸ್ ಇರುವುದರಿಂದ, ಅದನ್ನು ವಾಪಸ್ ತೆಗೆದುಕೊಳ್ಳುವಂಥ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಆರ್ಡಿನೆನ್ಸ್ ವಾಪಸ್ ತೆಗೆದುಕೊಳ್ಳುತ್ತೇವೆ ಎಂದರೆ ಅಲ್ಲಿ ಪ್ರಶ್ನೆಯೇ ಇರುವುದಿಲ್ಲ. ಅಲ್ಲಿ ಕೇಸ್ ಹಾಕಿದ್ದು ಏಕೆಂದರೆ ನೀವು ಅದನ್ನು ವಾಪಸ್ ತೆಗೆದುಕೊಳ್ಳುವುದಿಲ್ಲ ಈ ಎಲೆಕ್ಷನ್‌ನಲ್ಲಿ ನಾಮಿನೇಷನ್ ಮಾಡುವುದಕ್ಕೆ ಹೋಗುತ್ತಿದ್ದೀರಿ ಎಂದು ಹೇಳಿ ಜನರು ಕೇಸ್ ಹಾಕಿದ್ದು. ಇದನ್ನು ವಾಪಸ್ ತೆಗೆದುಕೊಂಡರೆ ಕೇಸ್ ಮುಗಿದೇ ಹೋಗುತ್ತದೆ.

ಶ್ರೀ ಹೆಚ್.ನಾಗಪ್ಪ: ಇಲ್ಲ, ಇದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ: (ಕಾನೂನು ಮತ್ತು ಸಂಸದೀಯ ಸಚಿವರು): ಸಭಾಧ್ಯಕ್ಷರೆ, ಸರ್ಕಾರ ಇದರ ಬಗ್ಗೆ ಬಹಳವಾಗಿ ವಿಚಾರ ಮಾಡಿ ಸರ್ಕಾರದ ನೀತಿಗೆ ಅನುಗುಣವಾಗಿ ನಾಮಿನೇಷನ್ ಅನ್ನು ನಾವು ಅಧ್ಯಾದೇಶದ ಮುಖಾಂತರ ಜಾರಿಗೆ ತಂದಿದ್ದೇವೆ. ಈಗ ಅದರ ಸಿಂಧುತ್ವವನ್ನು ಪ್ರಶ್ನೆ ಮಾಡಿ ಉಚ್ಚ ನ್ಯಾಯಲಯದಲ್ಲಿ ಆ ವಿಷಯ ಬಾಕಿ ಇದೆ. ಅದು ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳಲಿ, ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಅಧ್ಯಾದೇಶವನ್ನೂ ಹೊರಡಿಸಿದ್ದೇವೆ. ಆದುದರಿಂದ ಈ ಅಧ್ಯಾದೇಶವನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ ಸುಪ್ರೀಂಕೋರ್ಟನಲ್ಲಿ ಅಥವಾ ಹೈಕೋರ್ಟನಲ್ಲಿರತಕ್ಕಂಥಾದ್ದು ನಾಮಿನೇಷನ್‌ಗಾಗಿ ಏನು ಆರ್ಡಿನೆನ್ಸ್ ಹೊರಡಿಸಿದ್ದಿರಿ, ಅದರ ಮೇಲೆ ನಮ್ಮ ಎಲೆಕ್ಟೆಡ್ ಮೆಂಬರ್ಸ್ ಚಾಲೆಂಜ್ ಮಾಡಿದ್ದಾರೆ. ತಾವಿದನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಅಂದರೆ ಇದು ನಿಲ್ಲುವ ಪ್ರಶ್ನೆಯೇ ಬರುವುದಿಲ್ಲ. ಇಲ್ಲಿ ನೀತಿಯ ಪ್ರಶ್ನೆ ಇದೆ. ನಾಮಿನೇಷನ್ ಮಾಡುತ್ತೇವೆ ಬದಲಾವಣೆ ಇಲ್ಲ ಅಂದರೆ ಅಧ್ಯಕ್ಷರೇ ನಾವು ಇಲ್ಲೇ ಧರಣಿ ಕೂರಬೇಕಾಗುತ್ತದೆ. ಮತ್ತೆ ಆಮೇಲೆ ಟೈಂ ವೇಸ್ಟಾಯಿತು ಎಂದು ಹೇಳಬಾರದು. ಚುನಾವಣೆಯಾದ ಮೇಲೆ ಆರ್ಡಿನೆನ್ಸ್ ಇಷ್ಯೂ ಮಾಡುತ್ತೀರಿ ಅದಕ್ಕೆ ತಕ್ಕಂತೆ ನಾಮಿನೇಷನ್ ಆದೇಶವನ್ನು ಇಷ್ಯೂ ಮಾಡುತ್ತೀರಿ. ಕಮಿಟಿಗಳು ಕಾನ್‌ಸ್ಟಿಟ್ಯೂಟ್ ಮಾಡುತ್ತೀರಿ. ಒಂದು ಕಡೆ ಆ ಸಮಿತಿ ವರದಿ ಸರಿಯಿಲ್ಲ ಎಂದು ಹೇಳುತ್ತದೆ ಇನ್ನೊಂದು ಕಡೆ ತಿದ್ದುಪಡಿ ಮೇಲೆ ತಿದ್ದುಪಡಿ ತರುತ್ತೀರಿ. ಈ ದ್ವಂದ್ವ ನೀತಿ ಸರಿಯಲ್ಲ ಅದನ್ನು ನಾವು ಖಂಡಿಸಿ ಧರಣಿ ಮಾಡಬೇಕಾಗುತ್ತದೆ.

(ಕಾಂಗ್ರೆಸ್ ಪಕ್ಷದ ಸದಸ್ಯರಿಂದ ಧರಣಿ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಸಭಾತ್ಯಾಗ ಮಾಡಿದರೂ ಧರಣಕ್ಕಿಂತ ಹೆಚ್ಚು ಗಂಭೀರ ವಿಷಯ ಇದು ಮನಗಂಡಿದ್ದೇವೆ. ಸರ್ಕಾರದ ಮನವೊಲಿಸುವಂತಹ ಪ್ರಯತ್ನ ಮಾಡಿದೆವು. ಅವರು ಏನು ಮಾಡಿದ್ದರು ಅದೇ ನಾವೂ ಮಾಡುವುದು ಎನ್ನುವ ತೀರ್ಮಾನಕ್ಕೆ ಈ ಸರ್ಕಾರವು ಬಂದಿದೆ. ಬಹುಶಃ ಜನ ಇದನ್ನು ಮೆಚ್ಚುವುದಿಲ್ಲ. ಹಗುರವಾಗಿ ಸರ್ಕಾರ ತೆಗೆದುಕೊಳ್ಳಬಹುದು. ಹಿಂದೆ ಮಾಡಿದಂತೆ ಈಗ ನಾವು ಮಾಡುವುದಕ್ಕೆ ಬಂದಿಲ್ಲ, ಹೊಸ ಪರಂಪರೆಹಾಕುತ್ತೇವೆ ಬದಲಾವಣೆ ತರುತ್ತೇವೆ ಎಂದು ಜನರಿಗೆ ಭರವಸೆ ಕೊಟ್ಟು ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಡದೇನೇ ಅವರಿಗೆ ಬೇಕಾದ ಅಧ್ಯಕ್ಷ ಉಪಾಧ್ಯಕ್ಷರಿಗೆ ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡದೇನೇ ಹಿಂಬಾಗಿಲಿನಿಂದ ತಮ್ಮವರನ್ನು ಯಾರನ್ನೋ ತಂದು ತಾವು ಅಧಿಕಾರದಲ್ಲಿ ಮುಂದುವರೆಯಬೇಕೆಂಮ ನಿಮ್ಮ ಪ್ರಯತ್ನ ಏನಿದೆ, ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ. ಏಕೆಂದರೆ ಈ ಅಧಿವೇಶನದಲ್ಲಿ ವೆಲ್‌ಗೆ ಬರಬಾರದು ಎಂದು ನಾವು ತೀರ್ಮಾನ ಮಾಡಿರುವುದರಿಂದ, ನೀವು ಮತ್ತೆ ವೆಲ್‌ನಲ್ಲಿ ಅವರು ಅಲ್ಲಿ ಇಬ್ಬರೂ ಸೇರಿ ಏನು ಮಾಡುತ್ತೀರೊ ಮಾಡಿ ನಾವು ಹೊರಗಡೆ ಕೂತು ನೋಡುತ್ತೇವೆ.

(ಬಿಜೆಪಿ ಸದಸ್ಯರಿಂದ ಸಭಾತ್ಯಾಗ)

ಶ್ರೀ ಎಂ.ಸಿ.ನಾಣಯ್ಯ: ಸ್ವಾಮಿ, ನಾವು ಹಿಂದಕ್ಕೆ ತೆಗೆದುಕೊಳ್ಳುವುದೂ ಇಲ್ಲ ಮತ್ತೆ ಅದಕ್ಕೆ ಅವರು ಹೇಳಿರುವ ತಿದ್ದುಪಡಿಯನ್ನು ನಾವು ತರುವುದೂ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವಾಗಲೂ ಅವರದು ಮೊಂಡುವಾದ ನಾವು ಕನ್‌ಸಿಡರ್ ಮಾಡುವುದಿಲ್ಲ, ನೀವು ಏನು ಬೇಕಾದರೂ ಮಾಡಿಕೊಳ್ಳಿ, ಎಂದು ಹೇಳುತ್ತಾರೆ. ಅವರೇ ಹೇಳಿದ ತತ್ವದ ಪ್ರಕಾರ ಅವರು ನಡೆದುಕೊಳ್ಳುವುದಿಲ್ಲ. ಎರಡನೆಯದೇನೆಂದರೆ ಯಾವುದೋ ಪ್ರಸಂಗಗಳನ್ನು ಯಾವುದಕ್ಕೋ ಜೋಡಿಸುವುದು. ಎಪಿಎಂಸಿ ಪ್ರಸಂಗ ಬಂದರೆ ಸೊಸೈಟೀದು ನಾಮಿನೇಷನ್ ತರುವುದು. ಸ್ವಲ್ಪವಾದರೂ ನಾವು ಯಾವ ಆಕ್ಟಿನ ಬಗ್ಗೆ ಮಾತನಾಡುತ್ತಿದ್ದೇವೆ ಎಂಬ ಸೀರಿಯೆಸ್‌ನೆಸ್ ಇಲ್ಲ ನಾವು ಹೀಗೆ ಮಾಡುವುದು ನೀವು ಏನು ಬೇಕಾದರೂ ಮಾಡಿ ಅಂದರೆ ಇವರಿಗೆ ಕತ್ತಿನಪಟ್ಟಿ ಹಿಡಿಯಲು ಆಗುತ್ತದೆಯೇ? ಪ್ರಜಾಪ್ರಭುತ್ವದಲ್ಲಿ ರೆಪ್ರೆಸೆಂಟ್ ಮಾಡಬಹುದು. ಆರ್ಗ್ಯುಮೆಂಟ್ ಮಾಡಬಹುದು, ಧರಣಿ ಮಾಡಬಹುದು-ಇಂತಹ ಮೊಂಡು ವರ್ತನೆ ಇದ್ದರೆ, naturally this is the only way ಇದು ಬಿಟ್ಟು ಬೇರೆ ಹಾದಿ ಏನು ಇದೆ?

ಶ್ರೀ ಎಂ.ಸಿ.ನಾಣಯ್ಯ: ಇವತ್ತು ಇವರು ನಾಮಕರಣ ಮಾಡಿದ ಪದ್ಧತಿ ಪ್ರತಿಭಟಿಸಿ ಧರಣಿ ಮಾಡುತ್ತಿದ್ದಾರೆ ಆದರೆ ಪ್ರಜಾಪ್ರಭುತ್ವ ಮೌಲ್ಯಗಳ ಬಗ್ಗೆ ಮಾನ್ಯ ಖರ್ಗೆಯವರು ಒಂದನ್ನು ತಿಳಿದುಕೊಳ್ಳಬೇಕಾಗುತ್ತದೆ: ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ತಾವೇನು ಮಾಡಿದಿರಿ? ಖರ್ಗೆಯಾಗಿ ಅಲ್ಲ ತಾವೇ ಸಹಕಾರ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ

ಮಾಡಿದ್ದು ಮತ್ತು ಎಷ್ಟು ನಾಮಿನೇಷನ್ ಮಾಡಿದಿರಿ; ಸೆಕ್ಷನ್ 52ಎ ಕಾನೂನಿನಡಿಯಲ್ಲಿ 1/3 of the total Members of the Board ನಿಮಗೆ 7 ಮಾಡುವುದಕ್ಕೆ ಅಧಿಕಾರ ಇರುವ ಕಡೆ 11 ರವರೆಗೆ ಮಾಡಿದಿರಿ. ಪ್ರಪಂಚದ ಇತಿಹಾಸದಲ್ಲಿ ನೀವು ಮಾಡದಿರುವ ಕೆಲಸವನ್ನೆಲ್ಲಾ ನೀವು ಮಾಡಿ ಪ್ರಜಾಪ್ರಭುತ್ವ ಪದ್ಧತಿಯನ್ನೆಲ್ಲಾ ಗಾಳಿಗೆ ತೂರಿ ಇವತ್ತು ಅದೇ ಮೌಲ್ಯಗಳನ್ನು ಸ್ವಲ್ಪ ಮಟ್ಟಿಗೆ ಧಿಕ್ಕರಿಸಿ ಬಾಪಿಗೆ ಬರುವುದು ಸರಿಯಲ್ಲ. ಆದ್ದರಿಂದ ಅವರು ಮಾಡದಿರುವ ಯಾವುದಾದರೂ ಕ್ರಮ ನಾವು ಮಾಡದೇ ಇದ್ದಿದ್ದರೆ ಅಥವಾ ಕಾನೂನು ವ್ಯಾಪ್ತಿಯಲ್ಲಿ ನಾಮಿನೇಷನ್ ಪದ್ಧತಿ ಇಲ್ಲದೇ ಇದ್ದಿದ್ದರೆ ನಾವು ಅದಕ್ಕೆ ಒಪ್ಪಿಕೊಳ್ಳುತ್ತಿದ್ದೆವು. ಯಾವ ಕಾರಣಕ್ಕಾಗಿ ನಾವು ಮಾಡಬೇಕಾಗಿದೆ ಎಂಬ ಕಾರಣಗಳನ್ನು ಕೊಟ್ಟಿದ್ದೇವೆ.

ಶ್ರೀ ಎಸ್.ರಾಜೇಂದ್ರನ್: ಸರ್ಕಾರ ನಾಮಕರಣ ಮಾಡುವ ಟೈಮಿನಲ್ಲಿ ಒಬ್ಬ ಅಡ್ವೊಕೇಟ್ ಇರಬೇಕು ಒಬ್ಬ ಡಾಕ್ಟರಿರಬೇಕು ಒಬ್ಬ ಸಮಾಜಕಾರ್ಯಕರ್ತ ಇರಬೇಕು ಎಂದು ಎಲ್ಲಾ ಅನೌನ್ಸ್‌ಮೆಂಟ್ ಮಾಡಿಬಿಟ್ಟು ಮುನಿಸಿಪಾಲಿಟಿಯಲ್ಲಿ ಒಬ್ಬ ಡಾಕ್ಟರೂ ಇಲ್ಲ ಅಡ್ವೊಕೇಟೂ ಇಲ್ಲ, ಯಾವ ಕಾನೂನು ಹೇಳುತ್ತಾರೋ ಮತ್ತೆ ತಪ್ಪು ಮಾಡಿಬಿಟ್ಟರೆ.... It is wrong on the part of the Government. They have to rectify that mistake. They should state clearly that they will appoint an Advocate, a Doctor.

SRI M.C.NANAIAH: You say whenever we think of nominating individuals, the men of position in the public life and social service should be considered. Certainly we will take note of it.

ಅಧ್ಯಕ್ಷರು: ಈಗ ಸದನವನ್ನು 10 ನಿಮಿಷ ಮುಂದೂಡಿ ಪುನಃ 5.00 ಗಂಟೆಗೆ ಸೇರೋಣ.

(ಸದನವು 4 ಗಂಟೆ 1 ನಿಮಿಷಕ್ಕೆ ಮುಂದೂಡಲ್ಪಟ್ಟಿತು)

(ಸದನವು ಪುನಃ 5.30 ಗಂಟೆಗೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಪೀಠವನ್ನಾಲಂಕರಿಸಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ ಪ್ರತಿಪಕ್ಷದಲ್ಲಿದ್ದುಕೊಂಡು ನಾವು ಯಾವುದೇ ರೀತಿಯಾಗಿ ವಾದ ಮಾಡಿಕೊಂಡು ಹೀಗೆ ಮಾಡಲೇಬೇಕೆಂದು ನಿಶ್ಚಯ ಮಾಡಿಕೊಂಡು ಮುಂದೆ ಹೋಗುತ್ತಿರುವುದರಿಂದ ಯಾವುದು ಸರಿ, ಯಾವುದು ತಪ್ಪು ಎಂದು ಜನ ತೀರ್ಮಾನ ಮಾಡುತ್ತಾರೆ. ನಾನು ಈಗಲೂ ವಿನಂತಿ ಮಾಡುತ್ತೇನೆ

ಸರ್ಕಾರದವರು ಯಾರನ್ನು ನಾಮಿನೇಷನ್ ಮಾಡುತ್ತಾರೆ ಅವರಿಗೆ ದಯಮಾಡಿ ಓಟಿಂಗ್ ಪವರನ್ನು ಕೊಡಬೇಡಿ. ಅನಿವಾರ್ಯವಾಗಿ ಮಾಡಲೇಬೇಕೆಂದು ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ. ಆ ಹಿನ್ನಲೆಯಲ್ಲಿ ನಾನು ಮತ್ತೆ ಸರ್ಕಾರಕ್ಕೆ ಹಾಗೂ ಕಾಂಗ್ರೆಸ್ ಪಕ್ಷದ ನನ್ನ ಸ್ನೇಹಿತರಿಗೂ ವಿನಂತಿಯನ್ನು ಮಾಡುತ್ತೇನೆ; ಬನ್ನಿ ನಮ್ಮ ಕಾರ್ಯಕಲಾಪವನ್ನು ಮುಂದುವರೆಸೋಣ. ಇದರ ಮೇಲೂ ಕೂಡ ಇಲ್ಲ ನಾವು ಓಟಿಂಗ್ ಕೊಡುತ್ತೇವೆ ಎಂದರೆ ಅದರ ಬಗ್ಗೆ ಜನ ತೀರ್ಮಾನ ಮಾಡುತ್ತಾರೆ. ನಾವು ಜನರ ಮುಂದೆ ಹೋಗುವುದು ಇದ್ದೇ ಇದೆ. ಆದಕಾರಣ ನಾವು ಕಾರ್ಯಕಲಾಪಕ್ಕೆ ಅಡ್ಡಿಯಾಗುವುದು ಬೇಡ, ಬಹಳಷ್ಟು ಮುಖ್ಯವಾದ ವಿಷಯಗಳು ಇವೆ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

SRI H.SHIVAPPA: It is pending before the Court. ನಾವು ಏನಾದರೂ ಮಾಡುವುದಕ್ಕೆ ಹೋದರೆ ಅದು ಸಬ್‌ಜ್ಯುಡಿಸ್ ಆಗುತ್ತದೆ.

ಅಧ್ಯಕ್ಷರು: ಏನಾಗುತ್ತದೆ? ನನಗೆ ದೂರ ಇರೋದರಿಂದ ಸರಿಯಾಗಿ ಕೇಳಲಿಲ್ಲ. ನನಗೆ ಪ್ರಿಜುಡೀಸ್ ಎಂದು ಕೇಳಿಸಿತು. They are inter-related terms i.e., subjudice and prejudice.

SRI H.SHIVAPPA: Inter-related somewhere; It could be understood either way.

MR. SPEAKER: Whenever you develop prejudice, you take protection under subjudice.

ಶ್ರೀ ಹೆಚ್.ಶಿವಪ್ಪ: ಮೈಕ್ ಸರಿ ಇಲ್ಲ ಎಂದು ಕಾಣುತ್ತದೆ. ಅದನ್ನು ನಾವು ಸರಿಪಡಿಸಬೇಕಾಗುತ್ತದೆ.

ಅಧ್ಯಕ್ಷರು: ನಾನು ಡೆಲಿಬರೇಟಾಗಿ ಮಾಡಿದೆ. Mike is alright.

ಶ್ರೀ ವಾಟಾಳ್ ನಾಗರಾಜ್: ಈ ನಾಮಕರಣ ಪದ್ಧತಿ ಒಂದು ರೀತಿ ಪ್ರಜಾತಂತ್ರಕ್ಕೆ ವಿರೋಧವಾದಂಥ ವ್ಯವಸ್ಥೆ. ನಿಮ್ಮ ಕಾಲದಲ್ಲಿ ಮಾಡಿದರು, ನಮ್ಮ ಕಾಲದಲ್ಲಿ ಮಾಡಿದರು ಎನ್ನತಕ್ಕಂಥದ್ದು ಇದೆ, ಇದನ್ನು ಅವರು ಹೇಳಿದರು. ಆದರೆ ಸರ್ಕಾರ ಉದ್ದೇಶಪೂರ್ವಕವಾಗಿ ಮಾಡಿ ಇದು ಕೇವಲ ಜನತಾ ದಳದ ಚುನಾವಣೆ ಎನ್ನುವಂಥ ರೀತಿಯಲ್ಲಿ ಮಾಡುತ್ತಿದೆ. ಸರ್ಕಾರ ಜನತಾ ದಳದ ಪಕ್ಷವೇ ಎನ್ನತಕ್ಕಂಥ ರೀತಿಯಲ್ಲಿ ಅವರು ಬದಲಾವಣೆ ಮಾಡತಕ್ಕಂಥದ್ದು ಸರಿಯಲ್ಲ. ಇದು ಪ್ರಜಾತಂತ್ರದಲ್ಲಿ ಅತ್ಯಂತ ಕಗ್ಗೊಲೆ ಎಂದು ನಾನು ಹೇಳುತ್ತಿದ್ದೇನೆ. ಆದ್ದರಿಂದ ನಾನು ತಮ್ಮನ್ನು ಹೇಳುತ್ತಿದ್ದೇನೆ ಇದಕ್ಕೆ ಹೋರಾಟ ಮಾಡುವುದಕ್ಕೆ ಅನೇಕ ವಿಧ ಇದೆ, ಆ ವಿಧದಲ್ಲಿ ನಾವು

ನಿರಂತರವಾದ ಹೋರಾಟ ಮಾಡೋಣ. ನಾನು ಸಹಿತ ಈ ಸಂದರ್ಭದಲ್ಲಿ ಧರಣಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಿದ್ದೇನೆ. ಬೆಂಬಲವನ್ನು ಕೊಡುವುದರ ಜೊತೆಗೆ ಇವೊತ್ತು, ನಾಳೆ ಇದರ ಬಗ್ಗೆ ನಾವು ಮಾತುಕತೆ ಮಾಡೋಣ ತಮ್ಮ ಕಾರ್ಯಾಲಯದಲ್ಲಿ ಮಾತುಕತೆ ಮಾಡುವುದಕ್ಕೆ ಮುಕ್ತ ಅವಕಾಶ ಇದೆ, ಮಾತುಕತೆ ಮಾಡಿ ಒಂದು ಅನುಕೂಲಕರವಾದ ಸ್ಥಿತಿಗೆ ಬರೋಣ ಎನ್ನತಕ್ಕಂಥ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಆದ್ದರಿಂದ ಮಾನ್ಯ ಖರ್ಗೆವರು ಹಾಗೂ ಇತರ ನನ್ನ ಸ್ನೇಹಿತರನ್ನು ಮನವಿ ಮಾಡುತ್ತಿದ್ದೇನೆ. ಇವೊತ್ತು ತಾತ್ಕಾಲಿಕವಾಗಿ ಧರಣವನ್ನು ಮುಂದೂಡಿ ನಾಳೆ ತಾವು ಸಭೆಯನ್ನು...

ಅಧ್ಯಕ್ಷರು: ಧರಣಿಯನ್ನು ತಾತ್ಕಾಲಿಕವಾಗಿ ಮುಂದೂಡುವುದಕ್ಕೆ ಹೇಳಬೇಡಿ. ಇವೊತ್ತು ಅಂತ್ಯ ಮಾಡುವುದಕ್ಕೆ ಹೇಳಿ. ನೀವು ಎಂತಹ ಸ್ನೇಹಿತರು, ಇವೊತ್ತು ಬೇಡ ಪುನಃ ನಾಳೆಗೆ ಕಂಟಿನ್ಯೂ ಮಾಡಿ ಎಂದು ಹೇಳುತ್ತಿದ್ದೀರಿ. ಯಡಿಯೂರಪ್ಪನವರು ಹೇಳಿದ ಮಾತು ಸತ್ಯ. ನಾವು ಮನವಿ ಮಾಡಿಕೊಳ್ಳುವುದು ಮಾಡಿಕೊಂಡಿದ್ದೇವೆ. ಅವರು ನಮ್ಮ ಮಾತಿಗೆ ಕಿವಿ ಕೊಡುತ್ತಾರೋ, ಕೊಡುವುದಿಲ್ಲವೋ ನಮ್ಮ ಸ್ನೇಹಿತರೆಲ್ಲಾ ಬರಲಿ, ಸಭೆ ನಡೆಸಿಕೊಂಡು ಹೋಗೋಣ ಎನ್ನತಕ್ಕಂಥ ಮಾತನ್ನು ಹೇಳಿದರು. ದಯಮಾಡಿ ತಾವು ಕೂಡ ಅದೇ ಲೈನಿನಲ್ಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಯಡಿಯೂರಪ್ಪನವರ ಮಾತಿಗೆ ನಾನು ಬೆಂಬಲ ಕೊಡುತ್ತೇನೆ. ಆದರೆ ತಾವು ಏನು ಕರೆದು ಮಾತನಾಡಬೇಕೆಂದಿದ್ದೀರಿ. ಅದಕ್ಕೂ ಕೂಡ ನನ್ನ ಸಹಮತ ಇದೆ. ನಾನು ನಾಳೆ ಕುಳಿತುಕೊಳ್ಳಬೇಕೆಂದು ಹೇಳುವ ವಾದಕ್ಕಿಂತ ಹೆಚ್ಚಾಗಿ ಅವರ ಮೊಂಡುತನ ಏನು ಇದೆ, ಆ ಮೊಂಡುತನದ ಬಗ್ಗೆ ನಾವು ಸ್ವಲ್ಪ ಬಿಗಿಯಾಗಿಲ್ಲದಿದ್ದರೆ, ಅದು ಇದೇ ರೀತಿ ನಡೆಯುತ್ತದೆ, ಎಲ್ಲದಕ್ಕೂ ಸಂಪೂರ್ಣವಾಗಿ ನಾಮಕರಣ ಮಾಡತಕ್ಕಂಥದ್ದು, ಆ ನಾಮಕರಣದಿಂದಲೇ ನಾವು ಬದುಕಿರುತ್ತೇವೆ ಎನ್ನತಕ್ಕಂಥ ರೀತಿಯಲ್ಲಿ ಸರ್ಕಾರ ಇರತಕ್ಕಂಥದ್ದು ಸರಿಯಾದುದಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮತ್ತೊಮ್ಮೆ ನೀವು ಮಾನ್ಯ ಮುಖ್ಯಮಂತ್ರಿಗಳನ್ನು ಕರೆದು ಮಾತುಕತೆಗೆ ಒಂದು ಅವಕಾಶ ಮಾಡಿಕೊಡಿ. ಅಲ್ಲಿಯವರೆಗೆ ನಮ್ಮ ಮಾನ್ಯ ಕಾಂಗ್ರೆಸ್ ಸದಸ್ಯರು ಮತ್ತು ಮಿತ್ರರು ಈ ಧರಣವನ್ನು ಮುಕ್ತಾಯ ಮಾಡಬೇಕೆಂದು ನಾನು ಕಳಕಳಿಯಿಂದ ತಮ್ಮ ಮೂಲಕ ಅವರಿಗೆ ಮಾಡುತ್ತಿದ್ದೇನೆ.

ಅಧ್ಯಕ್ಷರು: ನಾನೇನೋ ಸದನವನ್ನು ಮುಂದಕ್ಕೆ ಹಾಕೋಣ ಅಂದಿದ್ದೆ. ಆದರೆ ಶ್ಯಾಮನೂರು ಶಿವಶಂಕರಪ್ಪನವರು ಈಗತಾನೇ ಬಂದಿದ್ದಾರೆ ಅವರು ಸ್ವಲ್ಪಹೊತ್ತು ನಿಲ್ಲಲಿ ಎಂದು ಹೇಳುತ್ತೇನೆ.

(ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆಯವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ನೀವು ಮತ್ತು ಧರ್ಮಸಿಂಗ್‌ರವರು ಹೇಳಿದಮೇಲೆ ನಾನು ಇಲ್ಲ ಎನ್ನುತ್ತೇನಾ? ಧರಣಿವನ್ನು ಮುಕ್ತಾಯ ಮಾಡಿ ಚೆನ್ನಾಗಿ ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಇವೊತ್ತು ನೀವು ಸದನವನ್ನು ಮುಂದಕ್ಕೆ ಹಾಕುವುದು ಒಳ್ಳೆಯದು.

ಅಧ್ಯಕ್ಷರು: ನನಗೆ ಈ ತರಹದ ಸಲಹೆ ಬೇಕಾಗಿತ್ತು. ಅವರು ಕೊಟ್ಟಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ: ಇವೊತ್ತು ಗಮನ ಸೆಳೆಯುವ ಸೂಚನೆಗಳು ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿವೆ. ಅದಕ್ಕೆ ದಯವಿಟ್ಟು ಉತ್ತರಗಳನ್ನಾದರೂ ನಮಗೆ ಸಿಗುವಂತೆ ಮಾಡಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ಉತ್ತರಗಳನ್ನು ತರಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ದಯಮಾಡಿ ಇವೊತ್ತು ಸದನವನ್ನು ಮುಂದಕ್ಕೆ ಹಾಕಿ. ನಾಳೆ ನಾವು ನೀವು ಎಲ್ಲರೂ ತಮ್ಮ ಕಾರ್ಯಾಲಯದಲ್ಲಿ ಕುಳಿತು ಮಾತುಕತೆಯಾಡಿ ಒಂದು ಒಪ್ಪಂದಕ್ಕೆ ಬರೋಣ. ಆದ್ದರಿಂದ ಸಭೆಯನ್ನು ತಾವು ದಯಮಾಡಿ ಮುಂದಕ್ಕೆ ಹಾಕಿ.

5. ಪ್ರಕಟಣೆ

ಅಧ್ಯಕ್ಷರು: ಒಂದು ಪ್ರಕಟಣೆ ಇದೆ ಅದನ್ನು ಓದಿಬಿಡುತ್ತೇನೆ. ಭಾರತದ 50ನೆಯ ಸುವರ್ಣ ಮಹೋತ್ಸವದ ಅಂಗವಾಗಿ ವಿಧಾನ ಮಂಡಲದ ಸದಸ್ಯರುಗಳು ಹಾಗೂ ಸಿಬ್ಬಂದಿವರ್ಗದವರು ರಕ್ತದಾನ ಮಾಡಲು ಅನುಕೂಲವಾಗುವಂತೆ ನಾಳೆ ಬೆಳಿಗ್ಗೆ 9.00 ಗಂಟೆಗೆ ಬ್ಯಾಂಕ್ವಟ್ ಹಾಲ್‌ನಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಶಿಬಿರದಲ್ಲಿ ಭಾಗವಹಿಸಿ ಸ್ವಪ್ರೇರಣೆಯಿಂದ ರಕ್ತದಾನ ಮಾಡುವ ಮೂಲಕ ಶಿಬಿರವನ್ನು ಯಶಸ್ವಿಗೊಳಿಸಬೇಕಾಗಿ ಕೋರುತ್ತೇನೆ. ಈಗ ಸಭೆಯನ್ನು ಮುಂದಕ್ಕೆ ಹಾಕೋಣ. ನಾಳೆ ಇದನ್ನು ಸ್ವಾಲ್ವ್ ಮಾಡಲಿಕ್ಕೆ ಪ್ರಯತ್ನ ಮಾಡೋಣ.

ಈಗ ಸದನವನ್ನು ನಾಳೆ ಬೆಳಿಗ್ಗೆ ಪುನಃ 10.00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 35 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 21ನೇ ಆಗಸ್ಟ್ 1997ರ ಗುರುವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)